Prepared By: Dr Ramesh Bellamkonda 2026-04-21


ವಿಷಯ : ಈಗ ನಡೆಯುತ್ತಿರುವ ಭಾರತೀಯ ಪ್ರಜಾಪ್ರಭುತ್ವದ ಕೊಲೆ – ನಾವು ಎಚ್ಚೆತ್ತು ಇದನ್ನು ತಡೆಯೋಣ

# ಈಗ ನಡೆಯುತ್ತಿರುವ ಭಾರತೀಯ ಪ್ರಜಾಪ್ರಭುತ್ವದ ಕೊಲೆ - ನಾವು ಎಚ್ಚೆತ್ತು ಇದನ್ನು ತಡೆಯೋಣ.

(ಈ ಕೈಪಿಡಿ, ಭಾರತದ ಪ್ರಜಾಪ್ರಭುತ್ವವನ್ನು ರಕ್ಷಿಸಲು ಇಚ್ಚಿಸುವ ಎಲ್ಲರಿಗೂ)

ಕನ್ನಡ ಭಾರತೀಯರು

"ಪ್ರತಿ ಮಗು, ಮಹಿಳೆ, ಮತ್ತು ಪುರುಷ,
ಬಡತನದ ಹೊರೆಯಿಲ್ಲದೆ,
ಸಾಮಾಜಿಕ ದಬ್ಬಾಳಿಕೆ ಇಲ್ಲದೆ,
ಪೂರ್ಣವಾಗಿ ಅರಳುವ
ಕರ್ನಾಟಕವನ್ನೂ, ಭಾರತವನ್ನೂ,
ಕಟ್ಟೋಣ."



Kannada Indians

ಡಾ. ರಮೇಶ್ ಬೆಲ್ಲಂಕೊಂಡ
99005 20395

ಎಲ್ಲಾ ಭಾರತೀಯರಿಗೂ ನ್ಯಾಯಕ್ಕಾಗಿ ಕನ್ನಡ ಭಾರತೀಯರು

Kannada Indians for Justice for All Indians

# ಮುನ್ನೋಟ:

**SIR ಹಾಗೂ ಅದರ ಸಮಸ್ಯೆಗಳ ಬಗ್ಗೆ ಬಹಳಷ್ಟು ಚರ್ಚೆಗಳು ನಡೆಯುತ್ತಿವೆ.**

**ಒಬ್ಬ ವೈದ್ಯನಾಗಿ ನನಗೆ ಕಾಣುವುದು ಬಹಳಷ್ಟು ಜನ ಚಿನ್ಹೆಗಳು ಮತ್ತು ಲಕ್ಷಣಗಳ ಬಗ್ಗೆ ಮಾತಾಡ್ತಾ ಇದ್ದಾರೆ. ಮೂಲ ಕಾಯಿಲೆ ಮತ್ತು ಅದರ ಬೇರಿನ ಬಗ್ಗೆ ಮಾತನಾಡುತ್ತಿಲ್ಲ.**

**BJP ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುತ್ತೆ, ಆ ಚುನಾವಣಾ ಆಯುಕ್ತರು ಚುನಾವಣೆಗಳಲ್ಲಿ BJP ಯನ್ನು "ವಿಜೇತರು" ಎಂದು ಘೋಷಿಸುತ್ತದೆ.**

**ಈಗಿನ SIR ಅಡಿ ಮತ್ತು ಈಗಿನ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ರೀತಿಯ ಪ್ರಕಾರ, ಭಾರತದ ಪ್ರಜಾಪ್ರಭುತ್ವವು ICU ಅಲ್ಲಿ, ಕೋಮಾದಲ್ಲಿ ವೆಂಟಿಲೇಟರ್ ಮೇಲಿದ್ದು , ಬದಲಾಯಿಸಲು ಸಾಧ್ಯವಾಗದ ಮರಣವನ್ನು ವೇಗವಾಗಿ ಸಮೀಪಿಸುತ್ತಿದೆ.**

**ಈಗಿನ ಚುನಾವಣಾ ಆಯುಕ್ತರನ್ನು ಬಲವಂತವಾಗಿ ರಾಜೀನಾಮೆ ನೀಡುವಂತೆ ಮಾಡಬೇಕು.**

**ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಈಗಿನ ಪ್ರಕ್ರಿಯೆಯ ವಿರುದ್ಧ ಜನರು ಶಾಂತಿಯುತ, ಅಹಿಂಸಾತ್ಮಕ, ಅಸಹಕಾರ ಬಂಡಾಯವನ್ನು ಘೋಷಿಸಬೇಕು ಮತ್ತು ಜಾರಿಗೊಳಿಸಬೇಕು.**

**ನಮಗೆ ನಿಷ್ಪಕ್ಷಪಾತ ಪ್ರಾಮಾಣಿಕ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಒಂದು ಹೊಸ ಪಾರದರ್ಶಿಕ ವಿಧಾನ ಬೇಕು.**

**ಹಾಗೆ ಮಾತ್ರ ತೀವ್ರ ರೋಗಕ್ಕೆ ಒಳಪಟ್ಟಿರುವ ಭಾರತದ ಪ್ರಜಾಪ್ರಭುತ್ವ ಎಂಬ ರೋಗಿಯ ಚೇತರಿಕೆಗೆ ದಾರಿಯಾಗುತ್ತದೆ.**

**ನಮ್ಮೆಲ್ಲರಿಗೂ ಶುಭವಾಗಲಿ. ನಮಗೆ ಅದರ ಅವಶ್ಯಕತೆ ತುಂಬಾ ಇದೆ.**

21-04-2026

# ಈಗ ನಡೆಯುತ್ತಿರುವ ಭಾರತೀಯ ಪ್ರಜಾಪ್ರಭುತ್ವದ ಕೊಲೆ – ನಾವು ಎಚ್ಚೆತ್ತು ಇದನ್ನು ತಡೆಯೋಣ.

ಕಳೆದ ಹಲವು ವರ್ಷಗಳಿಂದ, ಭಾರತೀಯ ಪ್ರಜಾಪ್ರಭುತ್ವವನ್ನು ಹಂತಹಂತವಾಗಿ ಕೆಡವಲಾಗಿದೆ ಮತ್ತು ತೀವ್ರ ಹಾನಿ ಮಾಡಲಾಗಿದೆ. ಹೀಗೆ ನಡೆಯುತ್ತಿರುವ, ಈ ಪ್ರಜಾಪ್ರಭುತ್ವದ ಕೊಲೆಯ, **SIR (Special Intensive Review - ವಿಶೇಷ ತೀವ್ರ ಪರಿಷ್ಕರಣೆ)** ಎಂಬ ಘೋರ ಹಂತವನ್ನು ಈಗ ಕಾಣುತ್ತಿದ್ದೇವೆ. ಈ ಪತ್ರದಲ್ಲಿ ನಾವು ವಿಶೇಷವಾಗಿ 'SIR' ಅನ್ನು ಮತ್ತು ನಮ್ಮ ಪ್ರಜಾಪ್ರಭುತ್ವದ ಮೇಲೆ ಇತ್ತೀಚಿನ ಮಾರಣಾಂತಿಕ ಹಲ್ಲೆಗಳನ್ನು ನೋಡೋಣ..

**ಬಿಜೆಪಿ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುತ್ತದೆ, ಮತ್ತು ಆ ಚುನಾವಣಾ ಆಯುಕ್ತರು, ಬಿಜೆಪಿ ಒಂದು ದೊಡ್ಡ ಸ್ಪರ್ಧಿಯಾಗಿರುವ ಚುನಾವಣೆಗಳನ್ನು, ನಡೆಸುತ್ತಾರೆ. - ಈ ರೀತಿಯಲ್ಲಿ ಮುಕ್ತ ಮತ್ತು ನ್ಯಾಯಯುತವಾದ ಚುನಾವಣೆಗಳನ್ನು ನಡೆಸಲು ಸಾಧ್ಯವೇ?**

**ಭಾರತದಲ್ಲಿ ಚುನಾವಣಾ ಆಯುಕ್ತರ ಆಯ್ಕೆ:** ಭಾರತದಲ್ಲಿ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಬಗ್ಗೆ ಸಂಸತ್ತು ಕಾನೂನನ್ನು ರೂಪಿಸಬೇಕು ಎಂದು ಭಾರತದ ಸಂವಿಧಾನ ಹೇಳುತ್ತದೆ. ಇನ್ನೂ ಅಂತಹ ಕಾನೂನು ಜಾರಿಯಾಗಿರದ ಕಾರಣ, **1950 ರಲ್ಲಿ ಭಾರತದ ಮೊದಲ ಮುಖ್ಯ ಚುನಾವಣಾ ಆಯುಕ್ತರನ್ನು ಅಂದಿನ ಪ್ರಧಾನ ಮಂತ್ರಿಗಳು ಆಯ್ಕೆ ಮಾಡಿದ್ದರು.** ದುರದೃಷ್ಟವಶಾತ್, ಸಂಸತ್ತು ಅಗತ್ಯವಾದ ಕಾನೂನನ್ನು ರೂಪಿಸದೇ, ದಶಕಗಳ ಕಾಲ ಇದೇ ಪದ್ಧತಿ ಮುಂದುವರಿದಿತ್ತು. **2015 ರಲ್ಲಿ,** ಈ ಅನ್ಯಾಯ ಪದ್ಧತಿಯ ವಿರುದ್ಧ **ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (PIL) ಸಲ್ಲಿಸಲಾಯಿತು. ಮಾರ್ಚ್ 2023 ರಲ್ಲಿ, ಸುಪ್ರೀಂ ಕೋರ್ಟ್ ಒಂದು ಆದೇಶವನ್ನು ಹೊರಡಿಸಿತು:** ಸಂಸತ್ತು ಸೂಕ್ತ ಕಾನೂನನ್ನು ಮಾಡುವವರೆಗೆ, ಭಾರತದ ಚುನಾವಣಾ ಆಯುಕ್ತರನ್ನು **ಪ್ರಧಾನ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು, ಒಳಗೊಂಡ ಮೂವರ (3) ಸದಸ್ಯರ ಸಮಿತಿಯು** ಆಯ್ಕೆ ಮಾಡಬೇಕು ಎಂದು ಆದೇಶಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ, **ಡಿಸೆಂಬರ್ 2023** ರಲ್ಲಿ, ಅಂದಿನ **ಬಿಜೆಪಿ ಬಹುಮತದ ಭಾರತೀಯ ಸಂಸತ್ತು ಒಂದು ಕಾನೂನನ್ನು ಮಾಡಿತು - ಚುನಾವಣಾ ಆಯುಕ್ತರ ಆಯ್ಕೆಯನ್ನು ಪ್ರಧಾನ ಮಂತ್ರಿಗಳು, ಪ್ರಧಾನ ಮಂತ್ರಿಗಳು ಸೂಚಿಸುವ ಒಬ್ಬ ಕ್ಯಾಬಿನೆಟ್ ಸಚಿವ, ಮತ್ತು ವಿರೋಧ ಪಕ್ಷದ ನಾಯಕರನ್ನು ಒಳಗೊಂಡ, ಮೂವರ ಸದಸ್ಯರ ಸಮಿತಿಯು ಮಾಡಬೇಕು ಎಂದು. ಮುಂದುವರೆದು, ಈ 2023 ರ ಕಾನೂನು ಈ ಚುನಾವಣಾ ಆಯುಕ್ತರಿಗೆ, ಅವರ ಅಧಿಕೃತ ಕೆಲಸದ ಭಾಗವಾಗಿ, ಅವರು ಏನೇ ಮಾಡಿದರೂ, ಅಂತಹ ಕೃತ್ಯಗಳಿಗೆ, ಅವರ ಜೀವನಾದ್ಯಂತ, ಅವರಿಗೆ ಯಾವುದೇ ಜವಾಬ್ದಾರಿಯಿಂದ ಸಂಪೂರ್ಣ ರಕ್ಷಣೆ (Total Immunity) ನೀಡುತ್ತದೆ. ಯಾವುದೇ ನ್ಯಾಯಾಲಯವು ಕೂಡ, ಅವರ ಕೃತ್ಯಗಳ ಬಗ್ಗೆ ವಿಚಾರಣೆ ಕೂಡ ನಡೆಸುವಂತಿಲ್ಲ.**

**2014 ರಿಂದ, ಚುನಾವಣಾ ಆಯುಕ್ತರೆಲ್ಲರನ್ನೂ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮೂಲಕ ಬಿಜೆಪಿ ಪಕ್ಷವೇ ಆಯ್ಕೆ ಮಾಡಿದೆ**. ಭಾರತೀಯ ಜನತಾ ಪಕ್ಷವು ಭಾರತದ ಎಲ್ಲಾ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧಿಯಾಗಿದೆ. **ಇದು ಭಾರತದ ಚುನಾವಣೆಗಳಲ್ಲಿ ಇರುವ, ಬಹು ದೊಡ್ಡ, ಬಹಿರಂಗ, ಲಜ್ಜೆಗೆಟ್ಟ ಹಿತಾಸಕ್ತಿ ಸಂಘರ್ಷ (Conflict of Interest) ಅಲ್ಲವೇ?**

ಒಂದು ಉದಾಹರಣೆಗೆ, ಹೈಕೋರ್ಟ್‌ನಲ್ಲಿ ನಿಮ್ಮ (ಪಾರ್ಟಿ-ಎ) ಮತ್ತು ನಿಮ್ಮ ಎದುರಾಳಿಯ (ಪಾರ್ಟಿ-ಬಿ) ನಡುವೆ ಒಂದು ಪ್ರಕರಣವಿದೆ ಎಂದು ಭಾವಿಸಿ. ಎದುರಾಳಿಯು ನಿಮಗೆ 5 ಕೋಟಿ ರೂಪಾಯಿ ನೀಡಬೇಕು ಎಂದು ನೀವು ವಾದಿಸುತ್ತಿದ್ದೀರಿ, ನೀವೇ ಅವರಿಗೆ 5 ಕೋಟಿ ರೂಪಾಯಿ ನೀಡಬೇಕು ಎಂದು ಎದುರಾಳಿ ವಾದಿಸುತ್ತಿದ್ದಾರೆ. ಒಂದು ವೇಳೆ ನಿಮ್ಮ ಎದುರಾಳಿಯೇ ಈ ಪ್ರಕರಣವನ್ನು ತೀರ್ಮಾನಿಸಲು ನ್ಯಾಯಾಧೀಶರನ್ನು ನೇಮಿಸಿದರೆ, ನೀವು ಅದನ್ನು ಒಪ್ಪುತ್ತೀರಾ? ಅಥವಾ ನೀವೇ ನ್ಯಾಯಾಧೀಶರನ್ನು ನೇಮಿಸಿದರೆ, ನಿಮ್ಮ ಎದುರಾಳಿ ಅದನ್ನು ಒಪ್ಪಲು ಸಾಧ್ಯವೇ ?

**ಚುನಾವಣೆಗಳು ವಿವಿಧ ರಾಜಕೀಯ ಪಕ್ಷಗಳು ಅಥವಾ ವ್ಯಕ್ತಿಗಳ ನಡುವಿನ ಸ್ಪರ್ಧೆಗಳಾಗಿವೆ. ಚುನಾವಣೆಗಳಲ್ಲಿ ಗೆದ್ದವರಿಗೆ ಏನು ಲಾಭ?** ರಾಷ್ಟ್ರಮಟ್ಟದಲ್ಲಿ, ಚುನಾವಣೆ ಗೆದ್ದವರು 147 ಕೋಟಿ ಭಾರತೀಯರಲ್ಲಿ, ಕೆಲವರನ್ನು ಅಥವ ಎಲ್ಲರನ್ನೂ, ವಿವಿಧ ಪ್ರಮಾಣಗಳಲ್ಲಿ ನಿಯಂತ್ರಿಸುವ ಅಧಿಕಾರ ಪಡೆಯುತ್ತಾರೆ. ಅವರು ಭಾರತದ ಕೆಲವು ಅಥವ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನೂ ನಿಯಂತ್ರಿಸುವ ಅಧಿಕಾರ ಪಡೆಯುತ್ತಾರೆ. ಭಾರತದ ವಾರ್ಷಿಕ GDP ಪ್ರಸ್ತುತ ಸುಮಾರು 400 ಲಕ್ಷ ಕೋಟಿ ರೂಪಾಯಿಗಳು (4 ಟ್ರಿಲಿಯನ್ USA ಡಾಲರ್‌ಗಳು). ದೇಶದ ಬಹಳಷ್ಟು ರಾಜಕೀಯ ಪಕ್ಷಗಳು, ರಾಜಕಾರಣಿಗಳು, ಮತ್ತು ಸರ್ಕಾರಗಳಲ್ಲಿ, ಎಲ್ಲಾ ಮಟ್ಟಗಳಲ್ಲಿ, ಸಾಮಾನ್ಯವಾಗಿ ಬಹಳಷ್ಟು ಭ್ರಷ್ಟಾಚಾರ ಇದೆ ಎನ್ನುವುದು ಯಾರಿಗೂ ರಹಸ್ಯದ ವಿಷಯವೇನಲ್ಲ. ಚುನಾವಣೆಗಳಲ್ಲಿ ಗೆದ್ದ **ಅಪ್ರಾಮಾಣಿಕರು ಇಂತಹ ಭ್ರಷ್ಟಾಚಾರದ ಫಲವನ್ನು ನಿಯಂತ್ರಣಕ್ಕೆ ತೆಗೆದುಕೊಂಡು, ಅದರಿಂದ ಲಾಭ ಪಡೆಯಲು ಸಶಕ್ತರಾಗುತ್ತಾರೆ. ಅಪ್ರಾಮಾಣಿಕರು ಗೆದ್ದಾಗ ಅವರಿಗೆ ಲೂಟಿ ಮಾಡಲು, ಅಲ್ಲಿ ಬಹಳಷ್ಟು ಅವಕಾಶಗಳಿರುತ್ತವೆ.** ಚುನಾವಣೆಗಳು ಮುಕ್ತ ಮತ್ತು ನ್ಯಾಯಯುತವಾಗಿ ನಡೆಯದಿದ್ದಾಗ, "ನಾವು ಭಾರತದ ಪ್ರಜೆಗಳು" ("We the people of India") ನಿಜವಾದ ಸೋಲುವವರಾಗುತ್ತೇವೆ.

**2024ರ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಚುನಾವಣಾ ಆಯೋಗದ (ECI) ನಡತೆಯ ಒಂದು ಅವಲೋಕನ**

2024ರ ಸಂಸತ್ ಚುನಾವಣೆಯ ವೇಳಾಪಟ್ಟಿಯನ್ನು ಬಿಜೆಪಿಗೆ ಅನುಕೂಲವಾಗುವ ರೀತಿಯಲ್ಲಿ ರೂಪಿಸಲಾಗಿದೆ ಎಂದು ಅನೇಕ ಜನರು ಅನುಮಾನಿಸಿದ್ದರು. ಇದಲ್ಲದೆ, ಚುನಾವಣಾ ಪ್ರಚಾರದ ಸಮಯದಲ್ಲಿ, ನೀತಿ ಸಂಹಿತೆ ಉಲ್ಲಂಘನೆಯ ವಿಷಯಗಳಲ್ಲಿ ಚುನಾವಣಾ ಆಯೋಗವು (ECI) ಬಿಜೆಪಿಯ ಬಗ್ಗೆ ಬಹಳ ಮೃದು ಧೋರಣೆ ತಳೆದಿದೆ ಮತ್ತು ವಿರೋಧ ಪಕ್ಷಗಳ ವಿರುದ್ಧ ಹೆಚ್ಚು ಕಠಿಣವಾಗಿ ನಡೆದುಕೊಂಡಿದೆ ಎಂಬ ಅಭಿಪ್ರಾಯವಿತ್ತು. ಆದರೆ, ಮತದಾನ ದಿನದ ಅಂತ್ಯಕ್ಕೆ ಘೋಷಿಸಿದ ಮತದಾನದ ಪ್ರಮಾಣ ಮತ್ತು ಹಲವಾರು ದಿನಗಳ ನಂತರ ಘೋಷಿಸಲಾದ ಅಂತಿಮ ಮತದಾನ ಅಂಕಿ-ಅಂಶಗಳ ನಡುವಿನ ವ್ಯತ್ಯಾಸವನ್ನು **"ವೋಟ್ ಫಾರ್ ಡೆಮಾಕ್ರಸಿ" ("Vote for Democracy" "VFD")** ವಿಶ್ಲೇಷಿಸಿದಾಗ ಅತ್ಯಂತ ಆಘಾತಕಾರಿ ಅಂಶಗಳು ಬೆಳಕಿಗೆ ಬಂದವು. ದಿನದ ಅಂತ್ಯದ ಅಂಕಿ-ಅಂಶಗಳಿಗೆ ಹೋಲಿಸಿದರೆ, ನಂತರದ ಅಂತಿಮ ಅಂಕಿ-ಅಂಶಗಳಲ್ಲಿ ಭಾರಿ ಏರಿಕೆ ಕಂಡುಬಂದಿತ್ತು. ಈ ಬಗ್ಗೆ ಅರ್ಥಪೂರ್ಣವಾದ ಕಾರಣಗಳನ್ನು ಚುನಾವಣಾ ಆಯೋಗವು ನೀಡಲೇ ಇಲ್ಲ.

**2024ರ ಲೋಕಸಭಾ ಚುನಾವಣೆಯ ಕುರಿತು "ವೋಟ್ ಫಾರ್ ಡೆಮಾಕ್ರಸಿ" ವರದಿ:** ಜುಲೈ 22, 2024 ರಂದು, "ವೋಟ್ ಫಾರ್ ಡೆಮಾಕ್ರಸಿ" ಎಂಬ ಸಂಘಟನೆ 222 ಪುಟಗಳ ಸುದೀರ್ಘ ವರದಿಯನ್ನು ಒಂದು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿತು. ಇದರಲ್ಲಿ **"ಮತದಾನ ಅಕ್ರಮ (manipulation)"** ಮತ್ತು **"ಮತದಾನ ಹಾಗೂ ಎಣಿಕೆಯ ಸಮಯದಲ್ಲಿ ದುರ್ನಡತೆ"** ಹೇಗೆ ನಡೆದಿದೆ ಮತ್ತು, **ಈ ಮೂಲಕ 15 ರಾಜ್ಯಗಳಲ್ಲಿ ಕನಿಷ್ಠ 79 ಲೋಕಸಭಾ ಸೀಟುಗಳಲ್ಲಿ ಬಿಜೆಪಿ ಮತ್ತು ಎನ್‌ಡಿಎ (NDA) ಈ ಅಕ್ರಮದ ಲಾಭ ಹೇಗೆ ಪಡೆದಿವೆ ಎಂದು ತೋರಿಸಿದೆ.** ಇದು ಮೇಲ್ನೋಟಕ್ಕೆ ಜನಾದೇಶದ ಕಳ್ಳತನಕ್ಕೆ ದಾರಿಯಾಗಿದೆ. ಚುನಾವಣಾ ಆಯೋಗವು ಬಿಜೆಪಿ ಮತ್ತು ಎನ್‌ಡಿಎ ಪರವಾಗಿ ಪಕ್ಷಪಾತವಾಗಿ ವರ್ತಿಸಿದ್ದು ಮಾತ್ರವಲ್ಲದೆ, ವಿವಿಧ ಸಂಸದೀಯ ಕ್ಷೇತ್ರಗಳಲ್ಲಿ ಚಲಾವಣೆಯಾದ ಒಟ್ಟು ಮತಗಳ ಅಂಕಿ-ಅಂಶಗಳನ್ನು ಬಿಡುಗಡೆ ಮಾಡುವಲ್ಲಿ ಬಹಳ ನಿಗೂಢವಾಗಿ ಕಾರ್ಯನಿರ್ವಹಿಸಿದೆ.

ಮುಕ್ತ ಮತ್ತು ನ್ಯಾಯಯುತ ಚುನಾವಣೆಯ ತತ್ವಗಳ ಪ್ರಕಾರ, ಮತದಾನ ಮುಗಿದ ತಕ್ಷಣ ಮತ ಚಲಾಯಿಸಿದವರ ಸಂಖ್ಯೆಯನ್ನು ಬಿಡುಗಡೆ ಮಾಡಬೇಕು. ಇದು ಅವರ ಮೂಲಭೂತ ಕರ್ತವ್ಯವಾಗಿದೆ. ಸಾಮಾನ್ಯವಾಗಿ ಸಂಜೆ 5 ಅಥವಾ 6 ಗಂಟೆಗೆ ಮತದಾನ ಮುಕ್ತಾಯವಾಗುತ್ತದೆ. ಚುನಾವಣಾ ನಿಯಮಗಳ ಪ್ರಕಾರ, ಪ್ರತಿ ಬೂತ್‌ನಲ್ಲಿ ಚಲಾವಣೆಯಾದ ಮತಗಳ ಸಂಖ್ಯೆಯನ್ನು BLO (Booth Level Officer) ಅವರು ಲಿಖಿತವಾಗಿ BLA ಗಳಿಗೆ (ಮತಗಟ್ಟೆ ಏಜೆಂಟ್‌ಗಳಿಗೆ) ನೀಡಬೇಕು ಮತ್ತು ಅದಕ್ಕೆ ಅವರೆಲ್ಲರೂ ಸಹಿ ಹಾಕಬೇಕು (**ಫಾರ್ಮ್ 17C**). ನೈತಿಕತೆಯ ದೃಷ್ಟಿಯಿಂದ ಈ ಮಾಹಿತಿಯನ್ನು ಕೂಡಲೇ ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು. ಇಂದಿನ ತಂತ್ರಜ್ಞಾನದ ನೆರವಿನಿಂದ, ಪ್ರತಿ ಸಂಸದೀಯ ಕ್ಷೇತ್ರದಲ್ಲಿ ಚಲಾವಣೆಯಾದ ಒಟ್ಟು ಮತಗಳನ್ನು ಅದೇ ಸಂಜೆ ಸುಲಭವಾಗಿ ಕ್ರೋಢೀಕರಿಸಿ ಪ್ರಕಟಿಸಬಹುದು. ಅಗತ್ಯವಿದ್ದರೆ ಹೆಚ್ಚಿನ ಪರಿಶೀಲನೆ ನಡೆಸಿದ ನಂತರ, ಅದೇ ಸಂಜೆ ಅಥವಾ ಮರುದಿನ ಬೆಳಿಗ್ಗೆ ಅಂಕಿ-ಅಂಶಗಳನ್ನು 'ಅಂತಿಮ' ಎಂದು ಖಚಿತಪಡಿಸಬಹುದು. ಒಂದು ವೇಳೆ ದಿನದ ಅಂತ್ಯದ ಮತ್ತು ಅಂತಿಮ ಅಂಕಿ-ಅಂಶಗಳ ನಡುವೆ ವ್ಯತ್ಯಾಸವಿದ್ದರೆ, ಸರಿಯಾದ ಪಾರದರ್ಶಕ ಮತ್ತು ವಿವರವಾದ ಕಾರಣಗಳನ್ನು ಸಾರ್ವಜನಿಕವಾಗಿ ನೀಡಬೇಕಾಗುತ್ತದೆ. ಆದರೆ ಚುನಾವಣಾ ಆಯೋಗವು ಈ ರೀತಿಯ ಪ್ರಕ್ರಿಯೆಯನ್ನು ಅನುಸರಿಸಲಿಲ್ಲ.

2024ರ ಸಂಸತ್ ಚುನಾವಣೆ ಏಳು (7) ಹಂತಗಳಲ್ಲಿ ನಡೆಯಿತು. ಪ್ರತಿ ಹಂತದ ಮತದಾನದ ದಿನ ಸಂಜೆ ಸುಮಾರು 7 ಗಂಟೆಗೆ, ಆಯೋಗವು ಅಂದು ಚಲಾವಣೆಯಾದ ಒಟ್ಟು ಮತಗಳ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿತು, ಆದರೆ ಕ್ಷೇತ್ರವಾರು ಮತ್ತು ಬೂತ್‌ವಾರು ವಿವರಗಳನ್ನು ನೀಡಿರಲಿಲ್ಲ. ಅವರು ಕೇವಲ ಪ್ರತಿ ರಾಜ್ಯದಲ್ಲಿ ಚಲಾವಣೆಯಾದ ಮತಗಳನ್ನು ಒಟ್ಟು ಮತದಾರರ ಶೇಕಡಾವಾರು ಪ್ರಮಾಣದಲ್ಲಿ ಮಾತ್ರ ಬಿಡುಗಡೆ ಮಾಡಿತು. ಮೊದಲ ಹಂತದ ಮತದಾನದ ನಂತರ, ಹನ್ನೊಂದು (11) ದಿನಗಳ ಬಳಿಕ "ಅಂತಿಮ" ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿತು. ನಂತರದ ಹಂತಗಳಲ್ಲಿ, ಮತದಾನದ ದಿನದಂದು ಬಿಡುಗಡೆ ಮಾಡಿದ ಅಂಕಿ-ಅಂಶಗಳ ನಂತರ, ಮೂರರಿಂದ ಐದು (3 ರಿಂದ 5) ದಿನಗಳಲ್ಲಿ "ಅಂತಿಮ" ಅಂಕಿ-ಅಂಶಗಳನ್ನು ನೀಡಿತು. ಈ ಅಂತಿಮ ಅಂಕಿ-ಅಂಶಗಳೂ ಸಹ ಕೇವಲ ಶೇಕಡಾವಾರು ಪ್ರಮಾಣದಲ್ಲಿದ್ದವು.

ಮತದಾನದ ದಿನದಂದು ಬಿಡುಗಡೆಯಾದ "ದಿನದ ಅಂತ್ಯದ" ಅಂಕಿ-ಅಂಶಗಳು ಮತ್ತು ಹಲವು ದಿನಗಳ ಅಂತರದ ನಂತರ ಬಿಡುಗಡೆಯಾದ "ಅಂತಿಮ" ಅಂಕಿ-ಅಂಶಗಳ ನಡುವೆ **ಭಾರಿ ವ್ಯತ್ಯಾಸಗಳು** ಕಂಡುಬಂದವು. ಇಂತಹ ವ್ಯತ್ಯಾಸಗಳು ಏಕೆ ಉಂಟಾದವು ಎಂಬುದಕ್ಕೆ ಆಯೋಗವು ಯಾವುದೇ ಅರ್ಥಪೂರ್ಣ ಕಾರಣಗಳನ್ನು ನೀಡಲಿಲ್ಲ. ದಿನದ ಅಂತ್ಯದ ಮತದಾನದ ಅಂಕಿ-ಅಂಶಗಳನ್ನು ನೀಡಲು ಆಯೋಗದ ಬಳಿ ಪ್ರತಿ ಬೂತ್‌ನಿಂದ ಸಂಖ್ಯೆಗಳನ್ನು ಸಂಗ್ರಹಿಸಲು ಒಂದು ವಿಶ್ವಾಸಾರ್ಹ ವ್ಯವಸ್ಥೆ ಇರಲೇಬೇಕಲ್ಲವೇ? ಇಲ್ಲದಿದ್ದರೆ ಆಯೋಗವು ಅಂಕಿ-ಅಂಶಗಳನ್ನು ಹೇಗೆ ನೀಡುತ್ತದೆ? ಒಂದು ವೇಳೆ ಇದ್ದರೆ, 'ದಿನದ ಅಂತ್ಯದ' ಮತ್ತು 'ಅಂತಿಮ' ಅಂಕಿ-ಅಂಶಗಳ ನಡುವೆ ವ್ಯತ್ಯಾಸ ಏಕೆ ಇರಬೇಕು? **ಪ್ರಾಮಾಣಿಕ ವ್ಯವಸ್ಥೆಯಲ್ಲಿ ಇಂತಹ ವ್ಯತ್ಯಾಸಗಳು ಇರಲೇ ಬಾರದು.** ಒಂದು ವೇಳೆ ವ್ಯತ್ಯಾಸಗಳಿದ್ದರೆ, ತೀರಾ ಕಡಿಮೆ ಇರಬೇಕು ಮತ್ತು ಅದಕ್ಕೆ ಸರಿಯಾದ ಕಾರಣಗಳು ಇರಬೇಕು. ಚುನಾವಣಾ ಆಯೋಗದಿಂದ ಯಾವುದೇ ಅರ್ಥಪೂರ್ಣ ಕಾರಣಗಳು ಬರಲಿಲ್ಲ. ಈ ವ್ಯತ್ಯಾಸಗಳು ಮತ್ತು ಇತರೇ ಸಾರ್ವಜನಿಕವಾಗಿ ಲಭ್ಯವಿರುವ ದತ್ತಾಂಶಗಳನ್ನು ಬಳಸಿ, VFD ಪ್ರಕಟಿಸಿದ ವರದಿಯು, 2024ರಲ್ಲಿ ಬಿಜೆಪಿ ಮತ್ತು ಎನ್‌ಡಿಎ ಕನಿಷ್ಠ 79 ಸಂಸದೀಯ ಸೀಟುಗಳನ್ನು ಅಕ್ರಮವಾಗಿ "ಗೆದ್ದಿದೆ" ಎಂದು ಅಂದಾಜಿಸಿದೆ. ಹೀಗೆ ಅಕ್ರಮವಾಗಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಪ್ರಸ್ತುತ ಭಾರತದ ಒಕ್ಕೂಟ ಸರ್ಕಾರ ರಚಿಸಲು ದಾರಿ ಆಗಿದೆ.

(2024ರಲ್ಲಿ) "ದಿನದ ಅಂತ್ಯದ" ಮತ್ತು ಅಂತಿಮ ಅಂಕಿ-ಅಂಶಗಳ ನಡುವೆ ಯಾವಾಗಲೂ ಮತಗಳ ಸಂಖ್ಯೆ ಹೆಚ್ಚೇ ಆಗಿದೆ. ಕೆಲವು ರಾಜ್ಯಗಳಲ್ಲಿ, ಈ ಹೆಚ್ಚಳವು ದಿನದ ಅಂತ್ಯದ ಅಂಕಿ-ಅಂಶಗಳಿಗಿಂತ 10% ಅಥವಾ ಅದಕ್ಕಿಂತ ಹೆಚ್ಚು ಅಧಿಕವಾಗಿದೆ. ಈ ರೀತಿಯಾಗಿ

ಒಟ್ಟು ಸುಮಾರು **5 ಕೋಟಿ (ನಕಲಿ ಎಂದು ಕಾಣುವ) ಮತಗಳನ್ನು ಸೇರಿಸಲಾಗಿದೆ.** ಇದು ಚುನಾವಣಾ ಫಲಿತಾಂಶಗಳಲ್ಲಿ ಅಕ್ರಮ ನಡೆದಿದೆಯೇ ಎಂಬ ಗಂಭೀರ ಪ್ರಶ್ನೆಯನ್ನು ಹುಟ್ಟುಹಾಕುವುದಿಲ್ಲವೇ? ಎಷ್ಟೋ ರಾಜ್ಯಗಳಲ್ಲಿ, ಪ್ರತಿ ಸಂಸದೀಯ ಕ್ಷೇತ್ರಕ್ಕೆ ಸರಾಸರಿ ಒಂದು ಲಕ್ಷದಿಂದ ಎರಡು ಲಕ್ಷದಷ್ಟು ಮತಗಳ ಹೆಚ್ಚಳ ಕಂಡುಬಂದಿದೆ. ಅನೇಕ ಸಂದರ್ಭಗಳಲ್ಲಿ, ಗೆಲುವಿನ ಅಂತರವು ಈ ದಿನದ ಅಂತ್ಯದ ಮತ್ತು ಅಂತಿಮ ಅಂಕಿ-ಅಂಶಗಳ ನಡುವಿನ ಸರಾಸರಿ ವ್ಯತ್ಯಾಸಕ್ಕಿಂತ ಕಡಿಮೆ ಇತ್ತು. ಇದು ಅಂತಿಮ ಫಲಿತಾಂಶಗಳ ಮೇಲೆ ಈ ವ್ಯತ್ಯಾಸಗಳು ಎಷ್ಟು ಗಂಭೀರ ಪರಿಣಾಮ ಬೀರಿವೆ ಎಂಬುದನ್ನು ಸೂಚಿಸುತ್ತದೆ. ಅಂತಿಮ ಅಂಕಿ-ಅಂಶಗಳ ಈ ಹೆಚ್ಚಳವು ಬಿಜೆಪಿ ನೇತೃತ್ವದ ಎನ್‌ಡಿಎಗೆ ಗಣನೀಯವಾಗಿ ಲಾಭ ಮಾಡಿಕೊಟ್ಟಿದೆ.

## 2024ರ ಆಂಧ್ರಪ್ರದೇಶದ ವಿಧಾನಸಭಾ ಮತ್ತು ಸಂಸತ್ ಚುನಾವಣೆಗಳಲ್ಲಿ ಭಾರತೀಯ ಚುನಾವಣಾ ಆಯೋಗದ (ECI) ನಂಬಲಾಗದ ನಡತೆ

ಬೇರೆ ಬೇರೆ ಸಮಯಗಳಲ್ಲಿ ಪ್ರಕಟವಾದ ಮತದಾನದ ಅಂಕಿ-ಅಂಶಗಳ ಆಳವಾದ ಇತ್ತೀಚಿನ ವಿಶ್ಲೇಷಣೆಯಿಂದ ಕೆಲವು ಆಘಾತಕಾರಿ ಸಂಗತಿಗಳು ಬೆಳಕಿಗೆ ಬಂದಿವೆ. ಈ ವಿಶ್ಲೇಷಣೆಯನ್ನು ಸಂಪೂರ್ಣವಾಗಿ ಚುನಾವಣಾ ಆಯೋಗ ಮತ್ತು ಆಂಧ್ರಪ್ರದೇಶದ CEO (ರಾಜ್ಯ ಮಟ್ಟದಲ್ಲಿ ಆಯೋಗವನ್ನು ಪ್ರತಿನಿಧಿಸುವ ಮುಖ್ಯ ಚುನಾವಣಾಧಿಕಾರಿ) ಅವರ ಸಾರ್ವಜನಿಕ ಪ್ರಕಟಣೆಗಳನ್ನೇ ಆಧರಿಸಿ ಮಾಡಲಾಗಿದೆ. ಈ ತೀಕ್ಷ್ಣವಾದ ವಿಶ್ಲೇಷಣೆಯನ್ನು ಹೈದರಾಬಾದ್ ಮೂಲದ ಖ್ಯಾತ ಭಾರತೀಯ ಅರ್ಥಶಾಸ್ತ್ರಜ್ಞ, ರಾಜಕೀಯ ವಿಶ್ಲೇಷಕ ಮತ್ತು ಲೇಖಕ **ಡಾ. ಪರಕಾಲ ಪ್ರಭಾಕರ್** (ಇವರು ಭಾರತದ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ಪತಿ ಕೂಡ) ಅವರು ಇತ್ತೀಚೆಗೆ ಬಿಡುಗಡೆ ಮಾಡಿದ್ದು, ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿದೆ.

2024 ರಲ್ಲಿ ಆಂಧ್ರಪ್ರದೇಶದಲ್ಲಿ ಸಂಸತ್ ಚುನಾವಣೆ ಮತ್ತು ವಿಧಾನಸಭಾ ಚುನಾವಣೆಗಳು ಏಕಕಾಲದಲ್ಲಿ ನಡೆದವು. ಅಂದರೆ ಒಬ್ಬ ಮತದಾರ ಮತಗಟ್ಟೆಗೆ ಹೋಗಿ, ಗುರುತಿನ ಚೀಟಿ ತೋರಿಸಿ, ಮತದಾರರ ಪಟ್ಟಿಯಲ್ಲಿ ಹೆಸರು ಪರಿಶೀಲಿಸಿ, ಮತದಾರರ ನೋಂದಣಿ ಪುಸ್ತಕದಲ್ಲಿ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ನೀಡಿ, ಬೆರಳಿಗೆ ಶಾಹಿ ಹಾಕಿಸಿಕೊಂಡ ನಂತರ ಎರಡು ಬೇರೆ ಬೇರೆ EVM ಗಳಲ್ಲಿ ಮತ ಚಲಾಯಿಸಬೇಕಿತ್ತು- ಒಂದು ವಿಧಾನಸಭೆಗೆ ಮತ್ತು ಅದರ ಪಕ್ಕದಲ್ಲೇ ಇದ್ದ ಇನ್ನೊಂದು, ಸಂಸತ್ ಚುನಾವಣೆಗೆ. ಅದಾದ ಮೇಲೆ ಆ ಮತದಾರರು ಮತಗಟ್ಟೆಯಿಂದ ಹೊರಗೆ ಬರುವರು. ಅವರ ಹಿಂದಿರುವ ಮತದಾರರು ಅದೇ ಪ್ರಕ್ರಿಯೆಯನ್ನು ಪಾಲಿಸುವರು. ಹೀಗೆ ಎಲ್ಲಾ ಮತದಾರರು ಮತ ಚಲಾಯಿಸುವ ತನಕ ಮತದಾನ ಮುಂದುವರೆಯುತ್ತದೆ.

ಮತದಾನ ಬೆಳಿಗ್ಗೆ 7 ಗಂಟೆಗೆ ಆರಂಭವಾಗಿ ಸಂಜೆ 6 ಗಂಟೆಗೆ ಗೇಟ್‌ಗಳನ್ನು ಮುಚ್ಚಬೇಕಿತ್ತು. ಒಂದು ವೇಳೆ 6 ಗಂಟೆಯ ಮೊದಲು ಆವರಣ ಪ್ರವೇಶಿಸಿದವರು ಇನ್ನೂ ಉಳಿದುಕೊಂಡಿದ್ದರೆ, ಅವರೆಲ್ಲರೂ ಮತದಾನ ಮಾಡುವವರೆಗೆ ಮತದಾನ ಮುಂದುವರಿಯುತ್ತಿತ್ತು.

**ಆಂಧ್ರಪ್ರದೇಶದಲ್ಲಿ ಎನ್‌ಡಿಎ (NDA) ಒಟ್ಟು 25 ರಲ್ಲಿ 21 ಲೋಕಸಭಾ ಸ್ಥಾನಗಳನ್ನು ಮತ್ತು 175 ರಲ್ಲಿ 164 ವಿಧಾನಸಭಾ ಸ್ಥಾನಗಳನ್ನು ಗೆದ್ದಿತು.**

ಆಂಧ್ರ ಪ್ರದೇಶದ **ಒಟ್ಟು ಮತಗಟ್ಟೆಗಳ ಸಂಖ್ಯೆ ಇದ್ದಿದ್ದು 46,389, ಸರಾಸರಿ ಪ್ರತಿ ಬೂತ್‌ಗೆ 891 ಮತದಾರರು**.

ಆಂಧ್ರ ಪ್ರದೇಶದಲ್ಲಿದ್ದ **ಒಟ್ಟು ನೋಂದಾಯಿತ ಮತದಾರರು 4,13,33,702** [ನಾಲ್ಕು ಕೋಟಿ ಹದಿಮೂರು ಲಕ್ಷದ ಮೂವತ್ತ ಮೂರು ಸಾವಿರದ ಏಳುನೂರು ಎರಡು (ವಿಕಿಪೀಡಿಯಾ ಮಾಹಿತಿ)].

ಆ ದಿನ ಸಂಜೆ 5 ಗಂಟೆಯ ವೇಳೆಗೆ (ಮೇ 13, 2024) 68.04% ಮತದಾನವಾಗಿತ್ತು ಮತ್ತು ಬಹಳಷ್ಟು ಜನರು ಮತ ಚಲಾಯಿಸಲು ಕಾಯುತ್ತಿದ್ದರು ಎಂದು ಆಂಧ್ರ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿ ಪ್ರಕಟಿಸಿದ್ದರು. ರಾತ್ರಿ 8 ಗಂಟೆಯ ವೇಳೆಗೆ (ಮೂರು ಗಂಟೆಗಳ ನಂತರ) ಮತದಾನದ ಪ್ರಮಾಣ 68.12% ಎಂದು ಆಯೋಗ ತಿಳಿಸಿತ್ತು. (ಮತದಾನ ಮುಕ್ತಾಯದ ವೇಳೆಯಲ್ಲಿ ಈ ಮೂರು ಗಂಟೆಗಳಲ್ಲಿ ಒಟ್ಟು 0.08% ಹೆಚ್ಚಳ). ನಂತರ, ಅದೇ ರಾತ್ರಿ 11.45ಕ್ಕೆ ಮತದಾನದ ಪ್ರಮಾಣ 76.5% ಗೆ ಏರಿತು. (ಮತಗಟ್ಟೆ ಮುಚ್ಚುವ ಸಮಯದ ಬಹಳ ಹೊತ್ತಿನ ಬಳಿಕದ 3 ಗಂಟೆ 45 ನಿಮಿಷಗಳಲ್ಲಿ ಎಲ್ಲಾ ಬೂತ್‌ಗಳಲ್ಲೂ ಸೇರಿ, ಒಟ್ಟು ಮತದಾನದಲ್ಲಿ 8.38% ಏರಿಕೆ). ರಾತ್ರಿ 11.45ರ ವೇಳೆಗೆ ಆಂಧ್ರ ಪ್ರದೇಶದ ಮುಖ್ಯ ಚುನಾವಣಾಧಿಕಾರಿಗಳ ಪ್ರಕಾರ, ರಾಜ್ಯದ 3,500 ಮತಗಟ್ಟೆಗಳಲ್ಲಿ ಇನ್ನೂ ಮತದಾನ ನಡೆಯುತ್ತಿದೆ ಎಂದು ಘೋಷಿಸಿದ್ದರು. ಅದರ ಮುಂದಿನ ದಿನವಾದ 2024ರ ಮೇ 14ರಂದು, ರಾಜ್ಯದಲ್ಲಿ ಕೊನೆಯ ಮತ, ರಾತ್ರಿ 2 ಗಂಟೆಗೆ ದಾಖಲಾಗಿತ್ತು ಎಂದು ಆಂಧ್ರ ಪ್ರದೇಶದ ಮುಖ್ಯ ಚುನಾವಣಾಧಿಕಾರಿ ಪ್ರಕಟಿಸಿದ್ದರು. ಚುನಾವಣಾ ಆಯೋಗವು 2024ರ ಮೇ 17ರಂದು ಪ್ರಕಟಿಸಿದ ಅಂತಿಮ ವರದಿಯ ಪ್ರಕಾರ, ರಾಜ್ಯದ ಒಟ್ಟು ಮತದಾನ ಪ್ರಮಾಣ 80.66% ಆಗಿತ್ತು (ಮೇ 13–14 ರ ಮಧ್ಯರಾತ್ರಿ, ಮತಗಟ್ಟೆ ಮುಚ್ಚುವ ಸಮಯದ ಬಹಳ ಹೊತ್ತಿನ ನಂತರದ ಈ 2 ಗಂಟೆ 15 ನಿಮಿಷಗಳಲ್ಲಿ, 3,500 ಮತಗಟ್ಟೆಗಳಲ್ಲಿ ಮತದಾನ ನಡೆಯುತ್ತಿದ್ದ ವೇಳೆ, ಆಂಧ್ರ ಪ್ರದೇಶದ ಒಟ್ಟು ಮತದಾರರಲ್ಲಿ 4.16% ಹೆಚ್ಚುವರಿ ಮತಗಳು ದಾಖಲಾಗಿದ್ದವು). ಈ ಒಟ್ಟಾರೆ ವರದಿಗಳು ಈ ಕೆಳಗಿನ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ:

> ಒಟ್ಟು ಮತದಾರರ 4.16% ಎಂದರೆ (4,13,33,702*4.16%) = **17,19,482 (ಹದಿನೇಳು ಲಕ್ಷ ಹತ್ತೊಂಬತ್ತು ಸಾವಿರ ನಾನೂರ ಎಂಬತ್ತೆರಡು)** ಜನರು. ಇಷ್ಟೊಂದು ಜನರು 3,500 ಬೂತ್‌ಗಳಲ್ಲಿ ಮೇ 13 ಮತ್ತು 14ರ ಮಧ್ಯರಾತ್ರಿ 11.45 ರಿಂದ 2 ಗಂಟೆಯ ನಡುವೆ ಮತ ಚಲಾಯಿಸಲು ಸಾಧ್ಯವೇ? ಆ ನಂತರ ಅವರೆಲ್ಲರೂ ಸುರಕ್ಷಿತವಾಗಿ ಮನೆ ತಲುಪಲು ಆಯಿತೇ?

ಈ 3,500 ಮತಗಟ್ಟೆಗಳಲ್ಲಿನ ಮತದಾರರು ಸಂಜೆ 6 ಗಂಟೆಯಿಂದ (ಮತಗಟ್ಟೆ ಗೇಟುಗಳು ಮುಚ್ಚಿದ ನಂತರ) ಮಧ್ಯರಾತ್ರಿಯವರೆಗೆ, ಅಂದರೆ 6 ರಿಂದ 8 ಗಂಟೆಗಳ ಕಾಲ, ಸಾಲಿನಲ್ಲಿ ಕಾಯುತ್ತಿದ್ದರೇ? ಅವರು ಕುರ್ಚಿ ಮೇಲೆ ಕೂರಲು, ನೆಲದ ಮೇಲೆ ಕೂರಲು, ಮಲಗಲು, ಊಟ ಮಾಡಲು, ಇತ್ಯಾದಿ ಅವಶ್ಯಗಳು ಇತ್ತೇ ? ಅವರು ಈ ಅವಶ್ಯಕತೆಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯವಾಯಿತೇ ?

ಮಧ್ಯರಾತ್ರಿ 11.45 ಗಂಟೆಯಿಂದ 2 ಗಂಟೆಯವರೆಗೆ, ಅಂದರೆ 2 ಗಂಟೆ 15 ನಿಮಿಷಗಳು, ಅಂದರೆ 135 ನಿಮಿಷಗಳು 3,500 ಬೂತ್‌ಗಳಲ್ಲಿ 17,19,482 ಮತಗಳು, ಅಂದರೆ, ಪ್ರತಿ ಬೂತ್‌ನಲ್ಲಿ ಸರಾಸರಿ 491 ಮತಗಳು ಚಲಾವಣೆಯಾಗಿವೆ. ಅಂದರೆ ಪ್ರತಿಯೊಂದು ಮತಗಟ್ಟೆಯಲ್ಲಿ ಪ್ರತಿ ನಿಮಿಷಕ್ಕೂ ಸರಾಸರಿ 3.6 ಮತಗಳು ದಾಖಲೆ ಆದಂತಾಯಿತು. ಆಗ ಒಬ್ಬ ಮತದಾರನಿಗೆ ಎರಡು ಮತಗಳನ್ನು - ಒಂದು ವಿಧಾನಸಭೆ ಚುನಾವಣೆಗೆ ಮತ್ತು ಮತ್ತೊಂದು ಲೋಕಸಭೆ ಚುನಾವಣೆಗೆ - ಚಲಾಯಿಸಲು ಸರಾಸರಿ ಕೇವಲ 17 ಸೆಕೆಂಡುಗಳ ಸಮಯ ಮಾತ್ರ ಸಿಕ್ಕಂತಾಗುತ್ತದೆ. ಇದರ ಜೊತೆಗೆ, ಪ್ರತಿ ಬಾರಿ ಮತ ಚಲಾಯಿಸಿದಾಗ VVPAT ಸ್ಲಿಪ್ 7 ಸೆಕೆಂಡುಗಳ ಕಾಲ ಕಾಣಿಸುತ್ತದೆ ಮತ್ತು ಮತದಾರರು ಅದನ್ನು ಪರಿಶೀಲಿಸಲು ಕಾಯಬೇಕಾಗುತ್ತದೆ. ಒಬ್ಬನಿಗೆ ಸಿಕ್ಕಿದ 17 ಸೆಕೆಂಡ್‌ಗಳಲ್ಲಿ ಎರಡು ಮತಗಳಿಗೆ (1 ವಿಧಾನಸಭೆ ಮತ್ತು 1 ಲೋಕಸಭೆ) ಒಟ್ಟು (7 + 7 =) 14 ಸೆಕೆಂಡುಗಳು ಕೇವಲ VVPAT ಪರಿಶೀಲನೆಗೆ ಹೋಗುತ್ತವೆ. ಹೀಗಾಗಿ, ಮತಗಟ್ಟೆಯೊಳಗೆ ಹೋಗುವುದು, ಸಂಬಂಧಿತ ಪ್ರಕ್ರಿಯೆಗಳನ್ನು ನಡೆಸುವುದು, ಬಟನ್ ಒತ್ತುವುದು, ಕಾಯುವುದು ಸೇರಿದಂತೆ ಉಳಿದ ಎಲ್ಲಾ ಪ್ರಕ್ರಿಯೆಗಳಿಗೆ ಮತದಾರನಿಗೆ ಕೇವಲ 3 ಸೆಕೆಂಡುಗಳ ಸಮಯ ಮಾತ್ರ ಉಳಿಯುತ್ತದೆ. ಈ ರೀತಿ ನಿಜವಾಗಿಯೂ ಮತದಾನ ಮಾಡಲು ಸಾಧ್ಯವೇ?

ಮೇಲಿನವು ಕೇವಲ ಸರಾಸರಿ ಲೆಕ್ಕಾಚಾರಗಳಷ್ಟೇ. ಕೆಲವು ಮತಗಟ್ಟೆಗಳಲ್ಲಿ ಮತದಾರರ ಸಂಖ್ಯೆ ಕಡಿಮೆಯಾಗಿದ್ದರೆ, ಉಳಿದ ಕೆಲವು ಮತಗಟ್ಟೆಗಳಲ್ಲಿ ಪ್ರತಿಯೊಂದು ಮತಗಟ್ಟೆಗೆ 491ಕ್ಕಿಂತಲೂ ಹೆಚ್ಚು ಮತಗಳು ದಾಖಲು ಆಗಿರಬೇಕಾಗುತ್ತದೆ. ಅಂದರೆ, ಆ ಮತಗಟ್ಟೆಗಳಲ್ಲಿ ಪ್ರತಿಯೊಬ್ಬ ಮತದಾರನಿಗೂ 17 ಸೆಕೆಂಡಿಗಿಂತಲೂ ಕಡಿಮೆ ಸಮಯ ಸಿಕ್ಕಂತಾಗುತ್ತದೆ. ಇದನ್ನು ನಂಬಲು ಇನ್ನೂ ಕಷ್ಟವಾಗುವುದಿಲ್ಲವೇ ?

ಮತಗಟ್ಟೆ ಮುಚ್ಚುವ ಸಮಯಕ್ಕೆ ಮತದಾನ ಪೂರ್ಣವಾಗಿಲ್ಲದಿದ್ದರೆ, ಚುನಾವಣಾ ಆಯೋಗದ ಸ್ವಂತ ನಿಯಮಗಳ ಪ್ರಕಾರ, ಈ ಕೆಳಕಂಡ ನಿಯಮಗಳನ್ನು ಪಾಲಿಸಬೇಕು;

ಹೊಸಬರು ಒಳಗೆ ಬರದಂತೆ ತಡೆಯಲು ಮತಗಟ್ಟೆಯ ಗೇಟುಗಳನ್ನು ಮುಚ್ಚಬೇಕು.

ಸಾಲಿನಲ್ಲಿ ಕಾಯುತ್ತಿರುವವರಿಗೆ ಟೋಕನ್‌ಗಳನ್ನು ನೀಡಬೇಕು. ಸಾಲಿನ ಕೊನೆಯ ವ್ಯಕ್ತಿಗೆ 1ನೇ ಸಂಖ್ಯೆಯ ಟೋಕನ್ ನೀಡಬೇಕು ಮತ್ತು ಮತಗಟ್ಟೆಗೆ ಅತೀ ಸಮೀಪದಲ್ಲಿರುವ ವ್ಯಕ್ತಿಗೆ ಅತಿ ಹೆಚ್ಚಿನ ಸಂಖ್ಯೆಯ ಟೋಕನ್ ಕೊಡಬೇಕು.

ಪ್ರತಿ ಮತಗಟ್ಟೆಯಲ್ಲೂ ಸಾಲಿನಲ್ಲಿ ಕಾಯುತ್ತಿರುವ ಮತದಾರರ ಮುಖಗಳು ಸ್ಪಷ್ಟವಾಗಿ ಕಾಣುವಂತೆ ವಿಡಿಯೋ ದಾಖಲು ಮಾಡಬೇಕು.

ಮತದಾರರು ಮತ ಚಲಾಯಿಸಲು ಮತಗಟ್ಟೆಯೊಳಗೆ ಬರುವಾಗ, ತಮಗೆ ಕೊಟ್ಟಿರುವ ಟೋಕನ್ ಅನ್ನು ಅಲ್ಲಿನ ಮುಖ್ಯ ಅಧಿಕಾರಿಗೆ (Presiding Officer ಗೆ) ನೀಡಬೇಕು.

ಆ ಅಧಿಕಾರಿ ಇಲ್ಲಿ ನಡೆಸಲಾದ ಸಂಪೂರ್ಣ ಪ್ರಕ್ರಿಯೆಯನ್ನು ತನ್ನ ಡೈರಿಯಲ್ಲಿ ದಾಖಲಿಸಬೇಕು.

ಮೇಲಿನ ಎಲ್ಲವುಗಳನ್ನು (ಟೋಕನ್‌ಗಳು, ವಿಡಿಯೋಗಳು, ಮುಖ್ಯ ಅಧಿಕಾರಿಯ ಡೈರಿ ಇತ್ಯಾದಿ), ದಾಖಲೆಗಳಾಗಿ, ನಂತರದ ಪರಿಶೀಲನೆಗೆ ಸಂರಕ್ಷಿಸಿ ಇಡಬೇಕು.

ಮತದಾನ ಪ್ರಕ್ರಿಯೆಯ ವಿಶ್ವಾಸಾರ್ಹತೆಯ ದೃಷ್ಟಿಯಿಂದ, ಚುನಾವಣಾ ಆಯೋಗವು ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಪಾರದರ್ಶಕವಾಗಿ ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು. ದುಃಖದ ವಿಷಯವೆಂದರೆ, ಈ ಬರಹದವರೆಗೆ ಡಾ. ಪರಕಾಲ ಅವರು ಎತ್ತಿರುವ ಯಾವುದೇ ಪ್ರಶ್ನೆಗಳು ಮತ್ತು ಆತಂಕಗಳಿಗೆ ಚುನಾವಣಾ ಆಯೋಗವು ಪ್ರತಿಕ್ರಿಯಿಸದೆ, ಮೌನ ವಹಿಸಿದೆ.

2024ರ ಮೇ 13ರಂದು ರಾತ್ರಿ 8 ಗಂಟೆಗೆ ಪ್ರಕಟಿಸಲಾದ 68.12% ಮತದಾನ ಪ್ರಮಾಣದಿಂದ, ನಾಲ್ಕು ದಿನಗಳ ಬಳಿಕ ಮೇ 17ರಂದು ಚುನಾವಣಾ ಆಯೋಗ (ECI) ಘೋಷಿಸಿದ 80.66% ಮತದಾನ ಪ್ರಮಾಣಕ್ಕೆ, ಒಟ್ಟು **51,83,246 (ಐವತ್ತೊಂದು ಲಕ್ಷ ಎಂಬತ್ತಮೂರು ಸಾವಿರ ಇನ್ನೂರ ನಲವತ್ತಾರು) ಮತಗಳ ಹೆಚ್ಚಳ** ಆಗಿದೆ. **ಇದು ಯಾಕೆ? ಚುನಾವಣಾ ಆಯೋಗ ಮೌನ ವಹಿಸಿದೆ.**

ಚುನಾವಣಾ ಆಯೋಗದ ಈ ನಡತೆಯ ಕಣ್ಣಿಗೆ ಕಾಣುವ ಫಲಿತಾಂಶ, ಆಂಧ್ರಪ್ರದೇಶದಲ್ಲಿ ಎನ್‌ಡಿಎ 25 ರಲ್ಲಿ 21 ಲೋಕಸಭಾ ಸೀಟುಗಳನ್ನು ಮತ್ತು 175 ರಲ್ಲಿ 164 ವಿಧಾನಸಭಾ ಸೀಟುಗಳನ್ನು "ಗೆದ್ದಿದೆ"..

## ಚುನಾವಣಾ ಆಯೋಗವು ಈಗ ಜನತೆಯನ್ನು ದಾರಿ ತಪ್ಪಿಸುವಂತಹ, ಏಕಪಕ್ಷೀಯ, ಅನ್ಯಾಯಯುತ ಮತ್ತು ಅಸಂವಿಧಾನಿಕವಾದ SIR (ವಿಶೇಷ ತೀವ್ರ ಪರಿಷ್ಕರಣೆ) ನಡೆಸುತ್ತಿದೆ

**SIR ಎಂಬುದು ಪರಿಷ್ಕರಣೆಯೇ ಅಲ್ಲ:** ***ಎಸ್‌ಐಆರ್ (SIR) ಎಂಬುದು ಈಗಿರುವ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ರದ್ದುಪಡಿಸಿ, ಹೊಸ ಮತದಾರರ ಪಟ್ಟಿಯನ್ನು ಸೃಷ್ಟಿಸುವ ಪ್ರಕ್ರಿಯೆಯಾಗಿದೆ.*** ಇದರ ಪರಿಣಾಮವಾಗಿ, ಈಗಿರುವ ಮತದಾರರ ಗುರುತಿನ ಚೀಟಿಗಳು ಸ್ವಯಂಚಾಲಿತವಾಗಿ ರದ್ದಾಗುತ್ತವೆ. ಇದನ್ನು "ಪರಿಷ್ಕರಣೆ" (revision) ಎಂದು ಕರೆಯುವ ಮೂಲಕ **ಚುನಾವಣಾ ಆಯೋಗವು ಸಾಮಾನ್ಯ ಜನರನ್ನು ದಾರಿ ತಪ್ಪಿಸುತ್ತಿದೆ.**

ನಿಜವಾದ ಪರಿಷ್ಕರಣೆಯಲ್ಲಿ, ಒಬ್ಬರ ಹೆಸರನ್ನು ತೆಗೆದುಹಾಕಬೇಕಾದರೆ (Delete ಮಾಡಬೇಕಾದರೆ), ಆಯೋಗವು ಆ ವ್ಯಕ್ತಿಗೆ ನೋಟಿಸ್ ನೀಡಬೇಕು. ಅಲ್ಲಿ ವಿಚಾರಣೆ ನಡೆಯಬೇಕು, ಅಧಿಕೃತ ಆದೇಶ ಹೊರಡಿಸಬೇಕು ಮತ್ತು ಆ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶವಿರಬೇಕು. ಆದರೆ SIR ನಲ್ಲಿ ಇಂತಹ ಯಾವುದೇ ವ್ಯವಸ್ಥೆ ಇಲ್ಲ.

**ಭವಿಷ್ಯದಲ್ಲಿ ಮತದಾರರಾಗಲು SIR ಈಗ ಹೊಸ ದಾಖಲೆಗಳೊಂದಿಗೆ ಹೊಸ ದಾಖಲಾತಿ ಫಾರ್ಮ್ ಅನ್ನು ಸಲ್ಲಿಸುವುದನ್ನು ಕಡ್ಡಾಯಗೊಳಿಸುತ್ತದೆ:**

ಹೊಸ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರನ್ನು ಸೇರಿಸಲು ನೀವು ಅರ್ಜಿ ಸಲ್ಲಿಸದಿದ್ದರೆ, ಅಂದರೆ ಅವರು ನಿಗಧಿ ಪಡಿಸಿದ ದಿನಾಂಕದೊಳಗೆ (ಫಾರ್ಮ್ ಸಿಕ್ಕ ನಂತರ 30 ದಿನಗಳಿಗೂ ಕಡಿಮೆ) "ದಾಖಲಾತಿ ನಮೂನೆ" (ಎನ್ಯುಮರೇಷನ್ ಫಾರ್ಮ್/ Enumeration Form) ಭರ್ತಿ ಮಾಡಿ ಸಲ್ಲಿಸದಿದ್ದರೆ, ನಿಮ್ಮ ಹೆಸರು ಹೊಸ ಪಟ್ಟಿಯಿಂದ ಸ್ವಯಂಚಾಲಿತವಾಗಿ ಬಿಟ್ಟು ಹೋಗಿರುತ್ತದೆ. ಇದಕ್ಕೆ ಯಾವುದೇ ನೋಟಿಸ್ ಇರುವುದಿಲ್ಲ, ವಿಚಾರಣೆ ಇರುವುದಿಲ್ಲ, ಆದೇಶವೂ ಇರುವುದಿಲ್ಲ, ಮೇಲ್ಮನವಿಯೂ ಇರುವುದಿಲ್ಲ. ***ಇದು ಕಾನೂನುಬದ್ಧ ಪ್ರಕ್ರಿಯೆಯನ್ನು ಅನುಸರಿಸದೆ ಹೆಸರನ್ನು ತೆಗೆದು ಹಾಕಿದಂತೆ.*** ಈ ರೀತಿ ಮತದಾನದ ಹಕ್ಕನ್ನು ಕಳೆದುಕೊಂಡವರಿಗೆ ಇರುವ ಪರಿಹಾರದ ಮಾರ್ಗಗಳೇನು ಅಥವಾ ಅವರು ಮತ್ತೆ ಮತದಾರರಾಗಲು ಸಾಧ್ಯವೇ, ಇದ್ದರೆ ಯಾವಾಗ, ಎಂಬುದು ಸದ್ಯಕ್ಕೆ ಸ್ಪಷ್ಟವಾಗಿಲ್ಲ.

**ಇದೆಲ್ಲವೂ ಏಕಪಕ್ಷೀಯ, ಅನ್ಯಾಯಯುತ, ಮತ್ತು ಮೇಲ್ನೋಟಕ್ಕೆ ಅಸಂವಿಧಾನಿಕ.**

**SIR ಹಿಂದೆಂದೂ ನಡೆದಿಲ್ಲ:** SIR ಈ ಹಿಂದೆ ಹಲವು ಬಾರಿ ನಡೆದಿದೆ ಎಂದು ಚುನಾವಣಾ ಆಯೋಗ ಹೇಳಿದಾಗಲೆಲ್ಲಾ, **ಚುನಾವಣಾ ಆಯೋಗವು, ಭಾರತೀಯ ಸಾರ್ವಜನಿಕರಿಗೆ ಸುಳ್ಳು ಹೇಳುತ್ತಿದೆ**.

**ಮತದಾರರ ಪಟ್ಟಿಯ ಪರಿಷ್ಕರಣೆಗಳು ಪ್ರತಿ ವರ್ಷ ಮತ್ತು ಚುನಾವಣೆಗಳಿಗೂ ಮೊದಲು (Summary Revisions) ಸಾಮಾನ್ಯವಾಗಿ ನಡೆಯುತ್ತವೆ**. ಒಂದು ವೇಳೆ ಮತದಾರರು ಸ್ಥಳಾಂತರಗೊಂಡರೆ, ಮರಣ ಹೊಂದಿದರೆ ಅಥವಾ ನಕಲಿ ಹೆಸರುಗಳಿದ್ದರೆ, 18 ವರ್ಷ ಮೇಲ್ಪಟ್ಟ ಹೊಸ ಮತದಾರರು ಇದ್ದರೆ, ಅಥವ ಯಾರಾದರು ಮತದಾರರು ಹೊಸದಾಗಿ ಆ ಸ್ಥಳಕ್ಕೆ ಬಂದು ವಾಸಿಸಿದ್ದರೆ, ಅಂತಹ ಮಾಹಿತಿಗಳನ್ನು ಪಡೆದು ಆಯೋಗದ ಏಜೆಂಟ್‌ಗಳು ನಿಯಮಾನುಸಾರ ಪಟ್ಟಿಯನ್ನು ನವೀಕರಿಸುತ್ತಾರೆ.

ಸುಮಾರು ಪ್ರತಿ ಹತ್ತು (10) ವರ್ಷಗಳಿಗೊಮ್ಮೆ **"ತೀವ್ರ ಪರಿಷ್ಕರಣೆಗಳು"** (Intensive Revisions) ನಡೆದಿವೆ. ಅಲ್ಲಿ **ಆಯೋಗದ ಏಜೆಂಟ್‌ಗಳು ಮನೆ ಮನೆಗೆ ಹೋಗಿ ಅಸ್ತಿತ್ವದಲ್ಲಿರುವ ಪಟ್ಟಿಯನ್ನು ಸಂಪೂರ್ಣವಾಗಿ ಪರಿಶೀಲಿಸಿ, ಎಲ್ಲರಿಗೂ ನ್ಯಾಯಯುತವಾಗಿ ಇರುವಂತೆ ಖಾತರಿ ಮಾಡಲು ನಿಗಧಿತ ಪ್ರಕ್ರಿಯೆಗಳ ಪ್ರಕಾರ, ನವೀಕರಿಸುತ್ತಾರೆ**.

1950 ರಿಂದ ಈವರೆಗಿನ ಎಲ್ಲಾ ಪರಿಷ್ಕರಣೆಗಳ ಪ್ರಮುಖ ಲಕ್ಷಣವೆಂದರೆ - ಒಬ್ಬ ವ್ಯಕ್ತಿಯು ಒಂದು ಸ್ಥಳದಲ್ಲಿ ಮತದಾರನಾಗಿದ್ದು, ಅದೇ ಸ್ಥಳದಲ್ಲಿ ವಾಸಿಸುತ್ತಿದ್ದರೆ, ಅವರು ಏನನ್ನೂ ಮಾಡದೇ ಮತದಾರರಾಗಿ ಮುಂದುವರೆಯುತ್ತಾರೆ. **ಅಂತಹ ಮತದಾರರು ಅದೇ ವಾಸಸ್ಥಳದಲ್ಲಿ ಮತದಾರರಾಗಿ ಮುಂದುವರೆಯಲು ಯಾವುದೇ ಫಾರ್ಮ್ ಭರ್ತಿ ಮಾಡುವ ಅಗತ್ಯವಿರಲಿಲ್ಲ.**

**ಈ ಕೆಳಗಿನ ಎರಡು ವಿಷಯಗಳು ಭಾರತದಲ್ಲಿ ಹಿಂದೆಂದೂ ಸಂಭವಿಸಿಲ್ಲ:**

ಅಸ್ತಿತ್ವದಲ್ಲಿರುವ ಮತದಾರರು ಪಟ್ಟಿಯಲ್ಲಿ ಮುಂದುವರಿಯಲು ಹೊಸದಾಗಿ ಅರ್ಜಿ ನೀಡುವಂತೆ ಯಾವತ್ತೂ ಕೇಳಿರಲಿಲ್ಲ.

ಅಸ್ತಿತ್ವದಲ್ಲಿರುವ ಮತದಾರರಿಂದ ಭಾರತೀಯ ಪೌರತ್ವದ ಪುರಾವೆಯನ್ನು ಯಾವತ್ತೂ ಕೇಳಿರಲಿಲ್ಲ. (ಭಾರತವು ಹಿಂದೆಂದೂ ಜನರಿಗೆ ಪೌರತ್ವ ಪ್ರಮಾಣಪತ್ರಗಳನ್ನು ನೀಡಿಲ್ಲ, ಹೀಗಿರುವಾಗ ಚುನಾವಣಾ ಆಯೋಗವು ಪೌರತ್ವದ ಪುರಾವೆ ಕೇಳುವುದು ತಪ್ಪಾಗುತ್ತದೆ).

**SIR ಗೆ ಸಂಪೂರ್ಣವಾಗಿ ಅವಾಸ್ತವಿಕ, ಅತ್ಯಂತ ಸಂಕುಚಿತ ಸಮಯದ ಚೌಕಟ್ಟು:** ಪ್ರತೀ ಬೂತ್‌ನಲ್ಲಿ ಸುಮಾರು ಒಂದು ಸಾವಿರ ಮತದಾರರಿರುತ್ತಾರೆ. ನೆಲಮಟ್ಟದ ವಾಸ್ತವಿಕವಾಗಿ ಈ SIR ಪ್ರಕ್ರಿಯೆಯನ್ನು, ಒಬ್ಬರೇ ಬೂತ್ ಮಟ್ಟದ ಅಧಿಕಾರಿ (BLO) ಮಾಡಬೇಕಾಗುತ್ತದೆ. BLO ಮೊದಲ ಸುತ್ತಿನಲ್ಲಿ ಮನೆ ಮನೆಗೆ ಹೋಗಿ, ಪ್ರತೀ ಮತದಾರರಿಗೂ ಒಂದು ದಾಖಲಾತಿ

ನಮೂನೆ ("Enrollment Form") ಕೊಡಬೇಕು. ಎರಡನೇ ಸುತ್ತಿನಲ್ಲಿ ಫಾರ್ಮ್ ಭರ್ತಿ ಮಾಡುವುದು ಹೇಗೆ, ಯಾವ ಯಾವ ದಾಖಲೆಗಳನ್ನು ನೀಡಬೇಕು ಎಂದು ವಿವರಿಸಿ, ಪ್ರತೀ ಮತದಾರರಿಗೆ ಈ ನಮೂನೆ ಸರಿಯಾಗಿ ಭರ್ತಿ ಮಾಡಿ ಸಲ್ಲಿಸಲು ಬೇಕಾಗಿರುವ ನೆರವನ್ನು ನೀಡಬೇಕು. ಮೂರನೇ ಸುತ್ತಿನಲ್ಲಿ ಫಾರ್ಮ್ ಮತ್ತು ದಾಖಲೆಗಳನ್ನು ಸಂಗ್ರಹಿಸಿ ಚುನಾವಣಾ ಆಯೋಗ ನೀಡಿರುವ BLO ಆ್ಯಪ್ ಮೂಲಕ, ಈ ಎಲ್ಲಾ ನಮೂನೆ (ಫಾರ್ಮ್)ಗಳನ್ನೂ, ದಾಖಲೆಗಳನ್ನೂ ಅಪ್‌ಲೋಡ್ ಮಾಡಬೇಕು. **ಈ ಎಲ್ಲಾ ಪ್ರಕ್ರಿಯೆಗಳನ್ನು BLO ಕೇವಲ ಮೂವತ್ತು (30) ದಿನಗಳಲ್ಲಿ ಮುಗಿಸಬೇಕು.**

BLO ಗಳು ಸ್ಥಳೀಯ ಶಾಲಾ ಶಿಕ್ಷಕರು ಅಥವಾ ಅಂಗನವಾಡಿ ಕಾರ್ಯಕರ್ತೆಯರು ಅಥವ ಚುನಾವಣಾ ಆಯೋಗ ನೇಮಕ ಮಾಡುವ ಬೇರೆ ಯಾರೇ ಇರಬಹುದು. ಎಷ್ಟೋ BLO ಗಳು ಈ ಕೆಲಸವನ್ನು ಕೊಟ್ಟಿರುವ ಸಮಯದಲ್ಲಿ, ಸರಿಯಾಗಿ ಮತ್ತು ನಿಖರವಾಗಿ ಮಾಡಲು ಬಹಳ ಕಷ್ಟ ಅಥವ ಅಸಾಧ್ಯ ಎಂದು ಅರಿಯುತ್ತಿದ್ದಾರೆ. ಎಷ್ಟೋ ಜನ ಅಡ್ಡದಾರಿಗಳನ್ನು ಹುಡುಕಿ ಕೊಳ್ಳುತ್ತಿದ್ದಾರೆ. ಎಷ್ಟೋ ಜನ ತಪ್ಪುಗಳನ್ನು ಮಾಡುತ್ತಿದ್ದಾರೆ. ಸುಮಾರಷ್ಟು ಜನ ಈ ಕೆಲಸದ ಒತ್ತಡ ತಡೆಯಲಾರದೇ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

**SIR ಮೂಲಕ, ಮತದಾರರ ದಾಖಲಾತಿ ಪ್ರಕ್ರಿಯೆಯ ಭಾಗವಾಗಿ, SIR ಗೆ ಮೊದಲು 2025 – 2026ರ ಮತಪಟ್ಟಿಯಲ್ಲಿ ಮತದಾರರ ಹೆಸರಿದ್ದರೆ, ಅವರು ಒಂದು ವೇಳೆ 2002 ರ ಮತದಾರರು ಆಗಿದ್ದರೆ, 2002ರ ಮತಪಟ್ಟಿಯಲ್ಲಿ ಅವರ ಹೆಸರು ಎಲ್ಲಿತ್ತು ಎಂದು ತೋರಿಸಬೇಕಾಗುತ್ತದೆ.** ಒಂದು ವೇಳೆ 2002ರ ಪಟ್ಟಿಯಲ್ಲಿ ಹೆಸರು ಪತ್ತೆಯಾಗದಿದ್ದರೆ, ಅವರು ಭಾರತೀಯ ಪೌರತ್ವವನ್ನು ಸಾಬೀತುಪಡಿಸಬೇಕು (ಗಮನಿಸಿ: ಭಾರತವು ಹಿಂದೆಂದೂ ಜನರಿಗೆ ಪೌರತ್ವ ಪ್ರಮಾಣಪತ್ರಗಳನ್ನು ನೀಡಿಲ್ಲ). 2002 ರ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಮತದಾರರು ಅವರ ಜನ್ಮ ದಿನಾಂಕದ ಆಧಾರದ ಮೇಲೆ, ಅವರ ತಂದೆ-ತಾಯಿಯರಲ್ಲಿ ಒಬ್ಬರು ಅಥವಾ ಇಬ್ಬರೂ ಕೂಡ ಭಾರತೀಯ ಪೌರರು ಎಂದು ಸಾಬೀತು ಪಡಿಸಬೇಕಾಗಬಹುದು.

ದಾಖಲಾತಿ ಫಾರ್ಮ್ ಅಥವಾ ಅಗತ್ಯ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸದ ಯಾವುದೇ ಮತದಾರನ ಹೆಸರನ್ನು ಸ್ವಯಂಚಾಲಿತವಾಗಿ "ತೆಗೆದು ಹಾಕಲಾಗುತ್ತದೆ" (Deleted).

ಬಿಎಲ್‌ಒಗಳು ಆಪ್ ಮೂಲಕ ನೋಂದಣಿ ಫಾರ್ಮ್‌ಗಳನ್ನು ಅಪ್‌ಲೋಡ್ ಮಾಡಿದ ನಂತರ, ಚುನಾವಣಾ ಆಯೋಗ ಮತದಾರರ "ಕರಡು ಪಟ್ಟಿ" (draft list) ಪ್ರಕಟಿಸುತ್ತದೆ. ನಂತರ, ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಮತದಾರರಿಗೆ ಚುನಾವಣಾ ಆಯೋಗವು "ನೋಟಿಸ್"ಗಳನ್ನು ಕಳುಹಿಸುತ್ತದೆ. ಆ ದಾಖಲೆಗಳನ್ನೂ ಮತ್ತೆ ಬಿಎಲ್‌ಒಗಳೇ ಅಪ್‌ಲೋಡ್ ಮಾಡಬೇಕಾಗುತ್ತದೆ. ಬಳಿಕ, ಯಾವ ಹೆಸರುಗಳು "ಅಂತಿಮ" ಮತದಾರರ ಪಟ್ಟಿಯಲ್ಲಿ ಇರಬೇಕು ಎಂಬುದರ ಬಗ್ಗೆ ಚುನಾವಣಾ ಆಯೋಗ ತೀರ್ಮಾನ ಕೈಗೊಳ್ಳುತ್ತದೆ.

ಕಣ್ಣಿಗೆ ಕಾಣುತ್ತಿರುವಂತೆ, SIR ಪ್ರಕ್ರಿಯೆಯು **ಅತ್ಯಂತ ಜಟಿಲವಾಗಿದೆ** ಮತ್ತು ಇದನ್ನು **ಅತ್ಯಂತ ಸಂಕುಚಿತ ಅವಧಿಯಲ್ಲಿ, ECI ಕಡೆಯಿಂದ ಸರಿಯಾದ ವ್ಯವಸ್ಥೆಗಳಿಲ್ಲದೆ, ಮಾಡಲಾಗುತ್ತಿದೆ**. ಇದು ದೊಡ್ಡ ಸಂಖ್ಯೆಯಲ್ಲಿ ಮತದಾರರ ಹೆಸರುಗಳು ಪಟ್ಟಿಯಿಂದ deletion ಗೆ ಕಾರಣವಾಗುತ್ತಿದೆ. ಇದು ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದಲ್ಲದೆ, ಅವರ ಪೌರತ್ವದ ಹಕ್ಕುಗಳಿಗೂ ಧಕ್ಕೆ ತರುವ ಸಾಧ್ಯತೆಯಿದೆ. ಭಾರತೀಯ ಚುನಾವಣಾ ಆಯೋಗ ತನ್ನ ಮನಸಿಗೆ ಬಂದಂತೆ, ಅನ್ಯಾಯಯುತವಾಗಿ ಇದನ್ನು ಮಾಡುತ್ತಿದೆ.

ಸಂವಿಧಾನದ ಪ್ರಕಾರ ಮತ್ತು ಈ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ, ಚುನಾವಣಾ ಆಯೋಗವು ವ್ಯಕ್ತಿಯ ವಯಸ್ಸು ಮತ್ತು ವಾಸಸ್ಥಳದ ಪುರಾವೆಯನ್ನು ಮಾತ್ರ ನೋಡಬೇಕು ಮತ್ತು ಅನ್ಯತಾ ಸಾಬೀತಾಗುವವರೆಗೆ, ಅವರನ್ನು ಭಾರತೀಯ ಪೌರರು ಎಂದು ಪರಿಗಣಿಸಬೇಕು. ಚುನಾವಣಾ ಆಯೋಗ (ECI) ತನಗೆ ತಾನೇ, ಮತದಾರರಿಂದ ಭಾರತೀಯ ಪೌರತ್ವದ ಪುರಾವೆಯನ್ನು ಕೇಳುವ ಹಕ್ಕು ಹೊಂದಿಲ್ಲ. ಒಬ್ಬ ವ್ಯಕ್ತಿಯ ಪೌರತ್ವವನ್ನು ನಿರ್ಧರಿಸುವ ಹಕ್ಕು ಕೂಡ ಚುನಾವಣಾ ಆಯೋಗಕ್ಕೆ ಇಲ್ಲ. ಪೌರತ್ವದ ಬಗ್ಗೆ ಸಂಶಯವಿದ್ದರೆ, ಆಯೋಗವು ಆ ಪ್ರಕರಣವನ್ನು ಗೃಹ ಸಚಿವಾಲಯಕ್ಕೆ ವಹಿಸಬೇಕು. ಗೃಹ ಸಚಿವಾಲಯ ಎಲ್ಲಾ ಕಾನೂನಾತ್ಮಕ ಪ್ರಕ್ರಿಯೆಗಳ ಅನುಸಾರ ತನಿಖೆ ನಡೆಸಬೇಕು.

**ಭಾರತವು ಈವರೆಗೆ ಜನರಿಗೆ ಯಾವುದೇ "ಪೌರತ್ವ ಪ್ರಮಾಣಪತ್ರ," ನೀಡಿರುವುದಿಲ್ಲ.** ಹಾಗಾಗಿ, ಆಯೋಗವು ನ್ಯಾಯಯುತವಾಗಿ ಮತದಾರರಿಂದ ಪೌರತ್ವ ದಾಖಲೆಗಳನ್ನು ಕೇಳುವ ಹಾಗಿಲ್ಲ.

ಮೇಲಿನ ವಿಚಾರಗಳಿಂದ ಏನು ಸ್ಪಷ್ಟವಾಗುತ್ತದೆ ಎಂದರೆ, ಭಾರತೀಯ ಚುನಾವಣಾ ಆಯೋಗವು ಮನಬಂದಂತೆ, ಅನ್ಯಾಯಯುತವಾಗಿ SIR ಪ್ರಕ್ರಿಯೆ ನಡೆಸುತ್ತಿದೆ. ಇದು ಸಂವಿಧಾನ ವಿರೋಧಿಯಾಗಿದೆ.

**ಕೋಟಿಗಟ್ಟಲೆ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗುತ್ತಿದೆ:**

ಈಗಾಗಲೇ 5 ಕೋಟಿಗೂ ಹೆಚ್ಚು ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗಿದೆ ಮತ್ತು ಹೀಗೆ ತೆಗೆದು ಹಾಕುವ ಒಟ್ಟು ಮತದಾರರ ಸಂಖ್ಯೆ ಸುಮಾರು 10 ರಿಂದ 15 ಕೋಟಿ ತಲುಪುವ ಸಾಧ್ಯತೆಯಿದೆ.

**ಬಿಹಾರದಲ್ಲಿ:** 65 ಲಕ್ಷ ಹೆಸರುಗಳನ್ನು ತೆಗೆಯಲಾಗಿದೆ.

**ಉತ್ತರ ಪ್ರದೇಶದಲ್ಲಿ:** 2 ಕೋಟಿ 90 ಲಕ್ಷ ಹೆಸರುಗಳನ್ನು ತೆಗೆಯಲಾಗಿದೆ.

**ತಮಿಳುನಾಡಿನಲ್ಲಿ:** 97 ಲಕ್ಷ ಹೆಸರುಗಳನ್ನು ತೆಗೆಯಲಾಗಿದೆ.

**ಗುಜರಾತ್‌ನಲ್ಲಿ:** 74 ಲಕ್ಷ ಹೆಸರುಗಳನ್ನು ತೆಗೆಯಲಾಗಿದೆ.

ಅನೇಕ ಹೆಸರುಗಳ ತೆಗೆಯುವಿಕೆಯು, ಸಾವು, ಬೇರೆ ಕಡೆ ಸ್ಥಳಾಂತರ, ಅಥವಾ ಡ್ಯುಪ್ಲಿಕೇಟ್ ಎಂಟ್ರೀಸ್ ಇರುವ ಕಾರಣಗಳು ನಿಜವಾದರೂ, SIR ಪ್ರಕ್ರಿಯೆಯಲ್ಲಿ ಬಳಸಲಾಗುತ್ತಿರುವ ಅವಾಸ್ತವಿಕ, ದೋಷಪೂರಿತ ಮತ್ತು ಕಾನೂನುಬಾಹಿರ ಪ್ರಕ್ರಿಯೆಗಳಿಂದ ದೊಡ್ಡ ಸಂಖ್ಯೆಯಲ್ಲಿ **ಬಡವರು, ಮುಸ್ಲಿಮರು, ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು** ಅನ್ಯಾಯಯುತವಾಗಿ ಪಟ್ಟಿಯಿಂದ ಹೊರಗೆ ಇಡಲಾಗುತ್ತಿದೆ.

ಈ ಸಂಬಂಧ ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ, ಆದರೆ ತೀರ್ಪು ಬರಲು ಇನ್ನೂ ಬಹಳಷ್ಟು ತಿಂಗಳುಗಳು ಮತ್ತು ಬಹಳಷ್ಟು ವರ್ಷಗಳೇ ಬೇಕಾಗಬಹುದು. ಈ ನಡುವೆ, ಸುಪ್ರೀಂ ಕೋರ್ಟ್ SIR ಜಾರಿಗೆ ತಡೆ ನೀಡಿಲ್ಲ. SIR ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುತ್ತಿದೆ. **ಸದ್ಯದ ಮಟ್ಟಿಗೆ, ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಸುಪ್ರೀಂ ಕೋರ್ಟ್ ವಿಫಲವಾಗಿದೆ.**

**ಕಾನೂನುಬಾಹಿರ ಬಾಂಗ್ಲಾದೇಶಿ ಮತದಾರರ ಬಗ್ಗೆ ಬಿಜೆಪಿ ಮತ್ತು ಚುನಾವಣಾ ಆಯೋಗ ಮಾಡಿದ ಮತ್ತು ಮಾಡುತ್ತಿರುವ ಗದ್ದಲವೆಲ್ಲವೂ ಪೊಳ್ಳು:** ಬಿಹಾರದ SIR ಪ್ರಕ್ರಿಯೆಯಲ್ಲಿ ಎಷ್ಟು ವಿದೇಶಿಯರನ್ನು ಪತ್ತೆ ಹಚ್ಚಲಾಗಿದೆ ಎಂಬ ಸಂಖ್ಯೆಯನ್ನು ಬಿಡುಗಡೆ ಮಾಡಲು ಆಯೋಗ ವಿಫಲವಾಗಿದೆ. ಸಾಮಾಜಿಕ ಕಾರ್ಯಕರ್ತರ ಸುದೀರ್ಘ ಪ್ರಯತ್ನದ ನಂತರ ಕಂಡುಬಂದ ವಿಷಯವೇನೆಂದರೆ, ಬಿಹಾರದ ಸುಮಾರು 8 ಕೋಟಿ ಮತದಾರರ ಪಟ್ಟಿಯಲ್ಲಿ ಕೇವಲ **ಮೂವರು (3) ದೃಢೀಕೃತ ಬಾಂಗ್ಲಾದೇಶಿಯರನ್ನು ("ವಿದೇಶಿಯರು")** ಮಾತ್ರ ಆಯೋಗವು ಪತ್ತೆಹಚ್ಚಿ ಹೊರಹಾಕಿದೆ.

**SIR ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗವು ಹೇಳುವುದು ಒಂದು,**
**ಮಾಡುವುದು ಇನ್ನೊಂದು.**

**ಆಯೋಗದ ಪ್ರಕಾರ SIR ನ ಉದ್ದೇಶ:** ಮೃತಪಟ್ಟವರು, ಸ್ಥಳಾಂತರಗೊಂಡವರು ಅಥವಾ ನಕಲಿ ಹೆಸರುಗಳನ್ನು ತೆಗೆದುಹಾಕುವುದು ಮತ್ತು ವಿದೇಶಿ ಪ್ರಜೆಗಳನ್ನು ಪಟ್ಟಿಯಿಂದ ಹೊರಗಿಡುವುದು. ಹಾಗೆಯೇ 18 ವರ್ಷ ತುಂಬಿದ ಹೊಸ ಮತದಾರರನ್ನು ಸೇರಿಸುವುದು, ಬೇರೆ ಕಡೆಯಿಂದ ವಲಸೆ ಬಂದಿರುವ ಮತದಾರರನ್ನು ಸೇರಿಸುವುದು, ಇದರ ಉದ್ದೇಶ ಎಂದು ಚುನಾವಣಾ ಆಯೋಗ ಹೇಳುತ್ತದೆ. ಒಟ್ಟಾರೆ ಇದು **"ಮತದಾರರ ಪಟ್ಟಿಯ ಶುದ್ಧೀಕರಣ" ಎಂದು ಹೇಳುತ್ತದೆ.** ಈ ಹೇಳಿರುವ ಉದ್ದೇಶಗಳು ಸಮಂಜಸವಾಗಿಯೇ ಕಾಣಿಸುತ್ತವೆ.

**ಆದರೆ ವಾಸ್ತವದಲ್ಲಿ SIR ಮಾಡುತ್ತಿರುವುದು ಏನನ್ನು:**

SIR ಮುಖ್ಯವಾಗಿ **ಅಧಿಕೃತ ಮತದಾರರ ಹೆಸರುಗಳನ್ನು ತೆಗೆದು ಹಾಕುವ** ಪ್ರಕ್ರಿಯೆಯಂತೆ ತೋರುತ್ತಿದೆ. ವಿಶೇಷವಾಗಿ ಬಿಜೆಪಿಗೆ ಮತ ಹಾಕುವ ಸಾಧ್ಯತೆ ಕಡಿಮೆ ಇರುವ ಮತದಾರರನ್ನು ಗುರಿಯಾಗಿಸಲಾಗುತ್ತಿದೆ. ಅರ್ಹ ಮತದಾರರ ಹೆಸರನ್ನು ಸೇರಿಸುವುದು ಇದರ ಪ್ರಮುಖ ಉದ್ದೇಶವಾಗಿ ಕಾಣುತ್ತಿಲ್ಲ.

ನಂತರದ ವರದಿಗಳ ಪ್ರಕಾರ, **'ಒಟ್ಟು ತೆಗೆದು ಹಾಕಿದ ಮತದಾರರ'** ಸಂಖ್ಯೆ ಕಡಿಮೆ ಎಂದು ತೋರಿಸಲು ದೊಡ್ಡ ಸಂಖ್ಯೆಯಲ್ಲಿ **ನಕಲಿ ಮತದಾರರನ್ನು** ಸೇರಿಸಲಾಗುತ್ತಿದೆ.

(ಸಂಸದೆ ಮಹುವಾ ಮೊಯಿತ್ರಾ ಅವರು ಹಂಚಿಕೊಂಡಿರುವ ಸಾಮಾಜಿಕ ಜಾಲತಾಣದ ವಿಡಿಯೋ ಒಂದರ ಪ್ರಕಾರ, ಪಶ್ಚಿಮ ಬಂಗಾಳದ ಹೊರಗಿನಿಂದ ಬಿಜೆಪಿ ಕಾರ್ಯಕರ್ತರು ಸಾವಿರಾರು ‹ಫಾರ್ಮ್6-› ಗಳನ್ನು ಹೊಸ ಮತದಾರರ ಸೇರ್ಪಡೆಗಾಗಿ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗಳ (CEO) ಕಚೇರಿಗೆ ತರುತ್ತಿದ್ದರು. ಇಂತಹ ಸಾವಿರಾರು ಫಾರ್ಮ್‌ಗಳ ರಾಶಿ ರಾಶಿ CEO ಕಚೇರಿಯಲ್ಲಿ ಕಂಡುಬಂದಿತ್ತು). ಇದು ಹೊಸ ಮತದಾರರ ಸೇರ್ಪಡೆಗೆ ಇರುವ ನಿಯಮಗಳ ಸಂಪೂರ್ಣ ಉಲ್ಲಂಘನೆಯಾಗಿದೆ. ಈ ಹಿಂದೆ ಮಹಾರಾಷ್ಟ್ರ (5 ತಿಂಗಳಲ್ಲಿ 40 ಲಕ್ಷ ಮತದಾರರ ಸೇರ್ಪಡೆ), ಹರಿಯಾಣ, ಮತ್ತು ದೆಹಲಿಯಲ್ಲೂ, ಇಂತಹ ಬಾರಿ ಸಂಖ್ಯೆಯಲ್ಲಿ ನಕಲಿ ಮತದಾರರ ಸೇರ್ಪಡೆಗಳು ವರದಿಯಾಗಿವೆ.

ಬಿಹಾರದಲ್ಲಿ ನಡೆದ SIR ನ ಮೊದಲ ಸುತ್ತಿನಲ್ಲಿ ಆಯೋಗವು 65 ಲಕ್ಷ ಹೆಸರುಗಳನ್ನು ತೆಗೆದು ಹಾಕಿತ್ತು. ಆದರೆ ಒಬ್ಬನೇ ಒಬ್ಬ ಹೊಸ ಮತದಾರನನ್ನು ಸೇರಿಸಿರಲಿಲ್ಲ. ನಂತರ, ಪ್ರೊ. ಯೋಗೇಂದ್ರ ಯಾದವ್ ಅವರಂತಹವರು ಈ ವಿಚಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಎತ್ತಿದ ನಂತರ, ಆಯೋಗವು ಬಿಹಾರದ ಪಟ್ಟಿಗೆ 21 ಲಕ್ಷ ಹೆಸರುಗಳನ್ನು ಸೇರಿಸಿತು ('ನಿವ್ವಳ ಸಂಖ್ಯೆ' 44 ಲಕ್ಷ ಮಾಡಲು).

**ಬಿಹಾರದ "ಅಂತಿಮ" SIR ಮತದಾರರ ಪಟ್ಟಿಯಲ್ಲಿ ಕಂಡುಬಂದ ದೋಷಗಳ ಬಗ್ಗೆ ಪ್ರೊ. ಯೋಗೇಂದ್ರ ಯಾದವ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಈ ಕೆಳಗಿನ ಅಂಶಗಳನ್ನು ಸಲ್ಲಿಸಿದರು:**

ಪಟ್ಟಿಯಲ್ಲಿ **5 ಲಕ್ಷ ಡ್ಯುಪ್ಲಿಕೇಟ್ ಮತದಾರರಿದ್ದರು** ಮತ್ತು ಇದಕ್ಕೆ ಸಂಬಂಧಿಸಿದಂತೆ ಅನೇಕ ಉದಾಹರಣೆಗಳನ್ನು ನೀಡಲಾಯಿತು. (ಇದಕ್ಕೆ ಉತ್ತರಿಸಿದ ಚುನಾವಣಾ ಆಯೋಗವು (ECI), 'ನಮ್ಮ ಬಳಿ ನಕಲಿ ಹೆಸರುಗಳನ್ನು ಪತ್ತೆಹಚ್ಚಲು ಮತ್ತು ತೆಗೆದುಹಾಕಲು ಯಾವುದೇ ಡಿ-ಡುಪ್ಲಿಕೇಶನ್ (De-duplication) ಸಾಫ್ಟ್‌ವೇರ್ ಇಲ್ಲ' ಎಂದು ಹೇಳಿತು.) ಆಗ ಪ್ರೊ. ಯಾದವ್ ಅವರು ತಮ್ಮ ತಂಡವು ಡಿ-ಡುಪ್ಲಿಕೇಶನ್ ಸಾಫ್ಟ್‌ವೇರ್ ಬಳಸಿಯೇ ಈ 5 ಲಕ್ಷ ನಕಲಿ ಹೆಸರುಗಳನ್ನು ಪತ್ತೆಹಚ್ಚಿದೆ ಎಂದು ಕೋರ್ಟ್‌ಗೆ ತಿಳಿಸಿದರು.

**ತಲಾ 10 ಕ್ಕಿಂತ ಹೆಚ್ಚು ಮತದಾರರನ್ನು ಹೊಂದಿರುವ 21 ಲಕ್ಷ ಮನೆಗಳಿದ್ದವು**. ಚುನಾವಣಾ ನಿಯಮಗಳ ಪ್ರಕಾರ, ಇಂತಹ ಮನೆಗಳಿಗೆ ಚುನಾವಣಾ ನೋಂದಣಿ ಅಧಿಕಾರಿ (ERO) ಭೇಟಿ ನೀಡಿ ಮತದಾರರ ಸಿಂಧುತ್ವವನ್ನು ಪರಿಶೀಲಿಸಬೇಕು. ಆದರೆ ಈ ಬಗ್ಗೆ ಪರಿಶೀಲನೆ ನಡೆಸಲಾಗಿದೆ ಎಂದು ತೋರಿಸಲು ಆಯೋಗಕ್ಕೆ ಸಾಧ್ಯವಾಗಲಿಲ್ಲ. ಪ್ರೊ. ಯಾದವ್ ಅವರು, ಒಂದೇ ಮನೆಗೆ 10ಕ್ಕಿಂತ ಹೆಚ್ಚು ಮತದಾರರ ಹೆಸರುಗಳಿದ್ದಂತಹ 21 ಲಕ್ಷ ಕುಟುಂಬಗಳ ಪಟ್ಟಿಯನ್ನು ಸಲ್ಲಿಸಿದ್ದರು.

**ಪ್ರೊ. ಯಾದವ್ ಅವರು ತಲಾ 700 ಕ್ಕೂ ಹೆಚ್ಚು ಮತದಾರರನ್ನು ಹೊಂದಿರುವ 10 ಮನೆಗಳ ಪಟ್ಟಿಯನ್ನು ನೀಡಿದರು**. ಇದರಲ್ಲಿ **ಒಂದು ಮನೆಯಲ್ಲಿ 801 ಮತದಾರರಿದ್ದರು!** ಈ ಬಗ್ಗೆ ಚುನಾವಣಾ ಆಯೋಗದ ಬಳಿ ಯಾವುದೇ ಉತ್ತರವಿರಲಿಲ್ಲ ಮತ್ತು ಸರಿಪಡಿಸುವ ಆಸಕ್ತಿಯೂ ಇರಲಿಲ್ಲ.

ಬಿಹಾರದ ಅಂತಿಮ ಮತದಾರರ ಪಟ್ಟಿಯಲ್ಲಿ **ಕೆಲವು ಮತದಾರರ ಹೆಸರುಗಳು ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಮುದ್ರಿತವಾಗಿದ್ದವು.** ಇದನ್ನು ಪ್ರೊ. ಯಾದವ್ ಕೋರ್ಟ್‌ನಲ್ಲಿ ತೋರಿಸಿದಾಗಲೂ ಆಯೋಗವು ಮೌನವಾಗಿತ್ತು.

ಅಂತಿಮ ಪಟ್ಟಿಯಲ್ಲಿ **ಸುಮಾರು 50,000 ಹೆಸರುಗಳು "e", "ka", "xyz" ಎಂದಿದ್ದವು ಅಥವಾ ಅರ್ಥವಾಗದ ಬರಹಗಳು,** ಇಲ್ಲವೇ ಯಾವುದೇ ಹೆಸರಿಲ್ಲದ, ಖಾಲಿ ಜಾಗಗಳಾಗಿದ್ದವು. ಸುಮಾರು ಅಂತಹವುಗಳಲ್ಲಿ, ತಂದೆಯ ಹೆಸರು ಮುಂತಾದ ಯಾವುದೇ ವಿವರಗಳಿರಲಿಲ್ಲ. ಈ ಬಗ್ಗೆಯೂ ಆಯೋಗವು ಏನೂ ಹೇಳಲಿಲ್ಲ.

**ದುರದೃಷ್ಟವಶಾತ್, ಪ್ರೊ. ಯಾದವ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಈ ಎಲ್ಲಾ ಅಂಶಗಳನ್ನು ಎತ್ತಿ ತೋರಿಸಿದ ಒಂದು ತಿಂಗಳ ನಂತರವೂ, ಚುನಾವಣಾ ಆಯೋಗವು ಅದೇ ದೋಷಪೂರಿತ ಮತದಾರರ ಪಟ್ಟಿಯನ್ನು ಬಳಸಿಕೊಂಡು ಬಿಹಾರದಲ್ಲಿ ಚುನಾವಣೆ ನಡೆಸಿತು**.

ಇದರಿಂದ **"ಮತದಾರರ ಪಟ್ಟಿಯನ್ನು ಸ್ವಚ್ಛಗೊಳಿಸಲು ಚುನಾವಣಾ ಆಯೋಗಕ್ಕೆ ಕಿಂಚಿತ್ತೂ ಆಸಕ್ತಿಯಿಲ್ಲ" ಎಂಬುದು ಸ್ಪಷ್ಟವಾಗುತ್ತದೆ.**

***ಸುಪ್ರೀಂ ಕೋರ್ಟ್ ಈ SIR ಪ್ರಕರಣದ ವಿಚಾರಣೆಯನ್ನು ಇನ್ನೂ ನಡೆಸುತ್ತಿದೆ, ಆದರೆ ಈ ಎಲ್ಲಾ ಮಾಹಿತಿಗಳನ್ನು ನೀಡಿದರೂ ಬಿಹಾರದ ಅಥವಾ ದೇಶದ ಇತರೇ ಭಾಗಗಳ SIR ಪ್ರಕ್ರಿಯೆಗೆ ತಡೆ ನೀಡಲಿಲ್ಲ.***

## ಭಾರತದ ಇವಿಎಂ (EVM) ವ್ಯವಸ್ಥೆಗಳು ಗಂಭೀರವಾಗಿ ರಾಜಿಯಾಗಿವೆ

ಶ್ರೀ ಮಾಧವ್ ಎ. ದೇಶಪಾಂಡೆ ಅವರು ಅಮೆರಿಕ ಮತ್ತು ಭಾರತದಲ್ಲಿ ವ್ಯಾಪಕ ಅನುಭವ ಹೊಂದಿರುವ ಖ್ಯಾತ ಕಂಪ್ಯೂಟರ್ ವಿಜ್ಞಾನಿ ಮತ್ತು ಐಟಿ ಸಿಸ್ಟಮ್ಸ್ ತಜ್ಞರು. ಅವರು ಹಿಂದೆ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಅವರ ಆಡಳಿತಕ್ಕೆ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ. ಭಾರತದ ಇವಿಎಂ ವ್ಯವಸ್ಥೆಯಲ್ಲಿನ ದೋಷಗಳನ್ನು ಅವರು ಹಲವು ವರ್ಷಗಳಿಂದ ಎತ್ತಿ ತೋರಿಸುತ್ತಿದ್ದಾರೆ ಮತ್ತು ಕೆಲವು ಸರಳ, ಕಡಿಮೆ ವೆಚ್ಚದ ಕ್ರಮಗಳ ಮೂಲಕ ಅವುಗಳನ್ನು ಹೇಗೆ ಹೆಚ್ಚು ವಿಶ್ವಾಸಾರ್ಹಗೊಳಿಸಬಹುದು ಎಂದು ತಿಳಿಸುತ್ತಿದ್ದಾರೆ. ಅವರು ನೀಡಿದ ಕೆಲವು ಸರಳ ಸಲಹೆಗಳನ್ನು ಚುನಾವಣಾ ಆಯೋಗವು ಇದುವರೆಗೆ ಜಾರಿಗೆ ತಂದಿಲ್ಲ:

ಇವಿಎಂನ ಕಂಟ್ರೋಲ್ ಯೂನಿಟ್‌ಗಳಲ್ಲಿ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸುವುದು. ಒಂದು ವೇಳೆ ಇವಿಎಂ ಯಂತ್ರವು ಹೋಗಬಾರದ ಜಾಗಕ್ಕೆ ಹೋಗಿ ಬಂದಿದ್ದರೆ, ಅದು ಕೂಡಲೇ 'ಏನೋ ತಪ್ಪು ನಡೆದಿದೆ' ಎಂದು ಸೂಚನೆ ನೀಡುತ್ತದೆ (Raise a Red flag).

ಮತದಾನದ ಸಮಯದಲ್ಲಿ ಇವಿಎಂ ಮತ್ತು ವಿವಿಪ್ಯಾಟ್ ಯಂತ್ರಗಳನ್ನು ಎಲೆಕ್ಟ್ರಾನಿಕ್ ಆಗಿ ಜೋಡಿಸುವುದು (Pairing). ಎಣಿಕೆಯ ಸಮಯದಲ್ಲಿ ಈ ಯಂತ್ರಗಳು, ಅದೇ ಜೋಡಣೆಯುಳ್ಳ ಯಂತ್ರಗಳೇ ಎಂದು ಮರು ಪರಿಶೀಲಿಸಬಹುದು.

ಮತದಾನ ಘಟಕ (Ballot Unit)ದಿಂದ ನಿಯಂತ್ರಣ ಘಟಕಕ್ಕೆ (Control Unit), ಅಲ್ಲಿಂದ VVPATಗೆ ಮತ್ತು ಮತ್ತೆ ನಿಯಂತ್ರಣ ಘಟಕಕ್ಕೆ ಡೇಟಾ ಸಾಗುವಾಗ, ಹಾಗೆಯೇ ಮತದಾನ ಮತ್ತು ಮತ ಎಣಿಕೆ ನಡುವಿನ ಅವಧಿಯಲ್ಲಿ ಡೇಟಾ ಸಾಗಿಸುವ ಸಂದರ್ಭದಲ್ಲಿ **"ಡೇಟಾ ಸಮಗ್ರತೆ" (Data Integrity) ಕಾಪಾಡಲಾಗಿದೆ ಎಂದು ತಿಳಿಯಲು "ಚೆಕ್ಸಮ್" (Checksum)**

**ಎಂಬ ಎಲೆಕ್ಟ್ರಾನಿಕ್ ಲಾಕ್** ವಿಧಾನವನ್ನು ಬಳಸಬಹುದು. ಮತದಾನ ಮುಗಿದ ತಕ್ಷಣ ಸೃಷ್ಟಿಯಾಗುವ ಚೆಕ್ಸಮ್ ಅನ್ನು ಮುದ್ರಿಸಿ ಪ್ರತಿಯೊಬ್ಬ BLAಗೆ ನೀಡಬಹುದು. ಜೊತೆಗೆ, ಪ್ರತಿ EVMಗೆ ಸಂಬಂಧಿಸಿದ ಚೆಕ್ಸಮ್ ಅನ್ನು ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬಹುದು. ನಂತರ ಮತ ಎಣಿಕೆಯ ಸಮಯದಲ್ಲಿ ಇದೇ ಚೆಕ್ಸಮ್ ಅನ್ನು ಹೋಲಿಕೆ ಮಾಡಿ, ಡೇಟಾವನ್ನು ತಿರುಚಲಾಗಿದೆಯೇ ಅಥವಾ ಹಸ್ತಕ್ಷೇಪ ನಡೆದಿದೆಯೇ ಎಂಬುದನ್ನು ಪರಿಶೀಲಿಸಬಹುದು. 40 ವರ್ಷಕ್ಕಿಂತ ಹಳೆಯದಾದ "ಚೆಕ್ಸಮ್" ತಂತ್ರಜ್ಞಾನವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಹಳವಾಗಿ ಬಳಕೆಯಾಗುತ್ತಿರುವ ಮತ್ತು ವಿಶ್ವಾಸಾರ್ಹ ವ್ಯವಸ್ಥೆಯಾಗಿದೆ.

ಇಡೀ ಭಾರತ ದೇಶದ ಮತದಾರರ ಪಟ್ಟಿಯನ್ನು ಕ್ಲೌಡ್‌ನಲ್ಲಿ ಸಂಗ್ರಹಿಸಿ ಇಡಲು, ವರ್ಷಕ್ಕೆ ಕೇವಲ 5,000 ರೂಪಾಯಿ ವೆಚ್ಚವಾಗಬಹುದು. ಇದನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದರೆ, ಯಾರು ಬೇಕಾದರೂ ನಕಲಿ ಹೆಸರುಗಳನ್ನು ಪತ್ತೆಹಚ್ಚಬಹುದು ಮತ್ತು ತಮ್ಮ ಹೆಸರು ಸರಿಯಾದ ಜಾಗದಲ್ಲಿದೆಯೇ ಎಂದು ಖಚಿತಪಡಿಸಿಕೊಳ್ಳಬಹುದು.

ದೇಶದ ಪ್ರತಿಯೊಂದು ಬೂತ್‌ನ ಮತದಾನ ಪ್ರಕ್ರಿಯೆಯ ವಿಡಿಯೋ ರೆಕಾರ್ಡಿಂಗ್ ಅನ್ನು ಸಂಗ್ರಹಿಸಿ ಇಡಲು, ವರ್ಷಕ್ಕೆ ಅಂದಾಜು 2.1 ಕೋಟಿ ರೂಪಾಯಿ (ಎರಡು ಕೋಟಿ ಹತ್ತು ಲಕ್ಷ ರೂಪಾಯಿ) ವೆಚ್ಚವಾಗಬಹುದು. ಇದನ್ನು ಬಹಳ ಸುಲಭವಾಗಿ ಸಂರಕ್ಷಿಸಿ ಪ್ರಕಟಿಸಬಹುದು. ಇದರಿಂದ ಚುನಾವಣಾ ಆಯೋಗವು ಹೇಳುವುದರ ಹಾಗೂ ಮಾಡುವುದರ ಮೇಲೆ ಸಾರ್ವಜನಿಕರ ವಿಶ್ವಾಸವನ್ನು ಸಂಪಾದಿಸಬಹುದು. ವೆಚ್ಚದ ಕಾರಣ ನೀಡಿ ಇದನ್ನು ನಿರಾಕರಿಸಲು ಸಾಧ್ಯವಿಲ್ಲ.

***ಚುನಾವಣಾ ಆಯೋಗವು ಈ ಮೇಲಿನ ಯಾವುದೇ ಸಲಹೆಗಳ ಬಗ್ಗೆ ಪಾರದರ್ಶಕವಾಗಿಲ್ಲ, ಮೌನವನ್ನು ವಹಿಸಿದೆ, ಮತ್ತು ಇವುಗಳನ್ನು ಸ್ವೀಕರಿಸುವ ಮನೋಭಾವ ತೋರಿಸಿಲ್ಲ.***

ಭಾರತದ ಈಗಿನ ವ್ಯವಸ್ಥೆಗಳ ಬಗ್ಗೆ, ಶ್ರೀ ಮಾಧವ್ ದೇಶಪಾಂಡೆ ಅವರು ವಿವಿಧ ಸಮಯಗಳಲ್ಲಿ, ವಿವಿಧ ಸಂದರ್ಭಗಳಲ್ಲಿ, ಮಾಡಿರುವ ಮಂಡನೆಗಳಲ್ಲಿ, ಬಹಳಷ್ಟು ಇತರೇ ಅಂಶಗಳನ್ನು ಹಂಚಿಕೊಂಡಿದ್ದಾರೆ. ಅವುಗಳಲ್ಲಿ ಕೆಲವು ಈ ಕೆಳ ಕಂಡಂತಿವೆ;

**ಸಿಂಬಲ್ ಲೋಡಿಂಗ್ ಯೂನಿಟ್ (SLU):** ಇದು ಚುನಾವಣಾ ಆಯೋಗದ ಒಂದು ಕೊಠಡಿಯಲ್ಲಿ ಕುಳಿತಿರುವ ವ್ಯಕ್ತಿಯ ಸೂಚನೆಯಂತೆ ಕಾರ್ಯನಿರ್ವಹಿಸುತ್ತದೆ.

ಬಿಹಾರದ SIR ನಂತರ, "ಅಂತಿಮ" ಮತದಾರರ ಪಟ್ಟಿ ಪ್ರಕಟವಾದ ಮೇಲೂ, ಮತದಾನದ ಕೇವಲ 5 ದಿನಗಳ ಮೊದಲು 3 ಲಕ್ಷ ಹೊಸ ಮತದಾರರನ್ನು ಸೇರಿಸಲಾಯಿತು. ಈ ಹೊಸದಾಗಿ ಸೇರ್ಪಡೆಯಾದವರು ಯಾರು ಎಂಬ ವಿವರವನ್ನು ಹುಡುಕಲು ಸಾಧ್ಯವಾಗುವಂತೆ ಸಾರ್ವಜನಿಕವಾಗಿ ಪ್ರಕಟಿಸಲಿಲ್ಲ.

ಇಡೀ ಇವಿಎಂ ವ್ಯವಸ್ಥೆಯಲ್ಲಿ, ವಿವಿಪ್ಯಾಟ್ (VVPAT) ಅತ್ಯಂತ ಶಕ್ತಿಶಾಲಿ ಮೈಕ್ರೋಪ್ರೊಸೆಸರ್ ಅನ್ನು ಹೊಂದಿದೆ.

ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯಲ್ಲಿ, "ಮತವು ಇಚ್ಛಿಸಿದಂತೆ ಚಲಾವಣೆ ಆಗಬೇಕು, ಚಲಾಯಿಸಿದಂತೆ ದಾಖಲಾಗಬೇಕು ಮತ್ತು ದಾಖಲಾದಂತೆ ಎಣಿಕೆಯಾಗಬೇಕು" ಎಂಬುದು ಮೂಲಭೂತ ತತ್ವ.

ಡೇಟಾದ ಪ್ರತೀ ಜಿಗಿತದಲ್ಲಿ, ಅಂದರೆ ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್, ಮತ್ತು ವಿವಿಪ್ಯಾಟ್‌ಗಳಲ್ಲಿ, ಅವಶ್ಯವಾಗಿ ಒಂದು ಮೈಕ್ರೋ ಕಂಟ್ರೋಲರ್ ಇರುತ್ತೆ. ಪ್ರತೀ ಮೈಕ್ರೋ ಕಂಟ್ರೋಲರ್ ಹಂತದಲ್ಲಿ, ಡೇಟಾವನ್ನು ಬದಲಿಸಲು ಸಾಧ್ಯತೆ ಇರುತ್ತದೆ.

ಭಾರತೀಯ ಇವಿಎಂ ವ್ಯವಸ್ಥೆಯಲ್ಲಿ "ಎಲೆಕ್ಟ್ರಾನಿಕ್ ಇವೆಂಟ್ ಆಡಿಟ್ ಟ್ರೇಲ್" (ಅಂದರೆ ಪ್ರತಿಯೊಂದು ಎಲೆಕ್ಟ್ರಾನಿಕ್ ಚಟುವಟಿಕೆಯ ಹಾದಿಯನ್ನು ದಾಖಲಿಸುವ ವ್ಯವಸ್ಥೆ) ಇಲ್ಲ.

ಸಿಂಬಲ್ ಲೋಡಿಂಗ್ ಯೂನಿಟ್‌ನಲ್ಲಿ (SLU ನಲ್ಲಿ),  ಇರುವ ಎಲ್ಲಾ ವಿಷಯಗಳ ಬಗ್ಗೆ ಯಾವುದೇ ಎಲೆಕ್ಟ್ರಾನಿಕ್ ವಿಷಯ ಪರಿಶೀಲನೆ ಇಲ್ಲ. ಈ SLU ಅತ್ಯಂತ ಅಪಾಯಕಾರಿ ಆಗಬಲ್ಲ ಸಾಧನವಾಗಿದೆ.

ಅಣಕು ಮತದಾನ (Mock Poll) ಮತ್ತು ಪರಿಶೀಲನೆಯ ಸಮಯದಲ್ಲಿ EVM ಸರಿಯಾಗಿ ಕಂಡರೂ, ನಿಜವಾದ ಮತದಾನದ 'ಸಮಯದಲ್ಲಿ' ಇವಿಎಂ ತಪ್ಪಾಗಿ ವರ್ತಿಸಿಲ್ಲ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ.

ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ, "ಸ್ಟಾಂಡರ್ಡ್ ಕಾರ್ಯಾಚರಣೆ ಪ್ರಕ್ರಿಯೆ" ("Standard Operating Procedure") ಪ್ರಕಾರ, ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್, ಮತ್ತು ವಿವಿ ಪ್ಯಾಟ್‌ಗಳಲ್ಲಿ, ಇರುವಂತಹ ಪ್ರತೀ ಎಲೆಕ್ಟ್ರಾನಿಕ್ ಚಿಪ್‌ಗೆ ಒಂದು ವಿಶೇಷ ಗುರುತು (ID) ಇರುತ್ತದೆ. ಆ ID ಗಳನ್ನು ದಾಖಲಿಸಬೇಕು ಮತ್ತು ಆ ದಾಖಲೆಗಳು ಸಮಯ – ಸಮಯಕ್ಕೆ ಆಡಿಟ್ ಗೆ ಲಭ್ಯವಿರಬೇಕು.

ಬ್ಲೂಟೂತ್ ಸ್ಪೀಕರ್ ಅನ್ನು ಫೋನ್‌ಗೆ ಜೋಡಿಸಿದಂತೆ, ಮತದಾನದ ದಿನ ಬಳಸುವ ಮೂರು ಯೂನಿಟ್‌ಗಳನ್ನು (ಬ್ಯಾಲೆಟ್, ಕಂಟ್ರೋಲ್, ವಿವಿಪ್ಯಾಟ್) ಒಂದನ್ನೊಂದು ಎಲೆಕ್ಟ್ರಾನಿಕ್ ಆಗಿ ಜೋಡಿಸಬೇಕು. ಈ ಜೋಡಣೆಯು ಎಣಿಕೆಯ ದಿನದವರೆಗೆ ಹಾಗೆಯೇ ಇರಬೇಕು.

ಚೆಕ್‌ಸಮ್ (Checksum) ಎಂಬುದು ಡೇಟಾದ ಮೌಲ್ಯಗಳು ಮತ್ತು ಡೇಟಾದ ಸ್ಥಾನಗಳ ಆಧಾರದ ಮೇಲೆ, ಗಣಿತದ ಸೂತ್ರವನ್ನು ಅನ್ವಯಿಸಿ ಪಡೆಯುವ ಒಂದು ಆಲ್ಫಾನ್ಯುಮರಿಕ್ (Alpha Numeric) ( ಅಕ್ಷರಗಳನ್ನು, ಅಂಕಿಗಳನ್ನು ಒಳಗೊಂಡ ನಂಬರ್ – ಉದಾಹರಣೆಗೆ ಪ್ಯಾನ್ ಕಾರ್ಡ್‌ನಲ್ಲಿ ಇರುವಂತೆ) ನಂಬರ್ ಆಗಿರುತ್ತೆ. ಮೂರೂ ಯೂನಿಟ್‌ಗಳ ಚೆಕ್‌ಸಮ್ ಒಂದೇ ಆಗಿದ್ದರೆ ಮಾತ್ರ ಡೇಟಾ ಮೂರೂ ಯೂನಿಟ್‌ಗಳಲ್ಲಿ ಒಂದೇ ಎಂದು ಹೇಳಬಹುದು.

EVM ವ್ಯವಸ್ಥೆಯ ಮೂರು ಘಟಕಗಳಲ್ಲಿ VVPAT ಅತಿ ಅಪಾಯಕಾರಿ ಘಟಕವಾಗಿದೆ. SLU ಎಂಬುದು VVPATಗೆ ಸಂಪರ್ಕಿಸಲಾಗುವ ಹೊರಗಿನ ಸಾಧನವಾಗಿದೆ. SLU ಹೇಗಿರುತ್ತದೆ ಎಂಬುದನ್ನು ಚುನಾವಣಾ ಆಯೋಗ (ECI) ಸಾರ್ವಜನಿಕವಾಗಿ ತೋರಿಸುವುದಿಲ್ಲ. ಆದರೆ ಅದು USB ಸಾಧನವಾಗಿರಬಹುದು ಅಥವಾ ವೈಯಕ್ತಿಕ ಕಂಪ್ಯೂಟರ್ (PC) ಆಗಿರಬಹುದು. VVPATಗೆ ಅಪ್‌ಲೋಡ್ ಮಾಡಬೇಕಾದ ಡೇಟಾವನ್ನು, ಒಂದೇ ಕೊಠಡಿಯಿಂದ ನಿಯಂತ್ರಿಸಲ್ಪಡುವ ಚುನಾವಣಾ ಆಯೋಗದ ವೆಬ್ ಸರ್ವರ್‌ನಿಂದ ಡೌನ್‌ಲೋಡ್ ಮಾಡಲಾಗುತ್ತದೆ ಮತ್ತು ಆ ಡೇಟಾ ಪ್ರತಿಯೊಂದು VVPATಗೆ ಪ್ರತ್ಯೇಕವಾಗಿರುತ್ತದೆ. ಯಾರಾದರೂ ಆ ವೆಬ್ ಸರ್ವರ್‌ನಲ್ಲಿರುವ ಡೇಟಾಕ್ಕೆ ಪ್ರವೇಶ ಪಡೆದರೆ, ಅವರು ಎಲ್ಲೋ ಒಂದು ಕಡೆ, 10 x 10 ಅಡಿ ಗಾತ್ರದ ಕೊಠಡಿಯಲ್ಲಿ ಕುಳಿತುಕೊಂಡು, ದೇಶದ ಯಾವುದೇ ಭಾಗದ ವಿವಿಧ VVPATಗಳಿಗೆ ಯಾವ ಡೇಟಾ ಡೌನ್‌ಲೋಡ್ ಆಗಬೇಕು ಎಂಬುದನ್ನು ನಿಯಂತ್ರಿಸುವ ಶಕ್ತಿ ಇದೆ. ಅವರು ಯಾವ ಕ್ಷೇತ್ರದಲ್ಲಿ ಯಾರು ಗೆಲ್ಲುವರು, ಮತ್ತು ಎಷ್ಟು ಅಂತರದಿಂದ ಗೆಲ್ಲುವರು, ಎಂಬುದನ್ನು ತೀರ್ಮಾನಿಸಬಹುದು.

SLU ನಲ್ಲಿ ಕೇವಲ ಅಭ್ಯರ್ಥಿಗಳ ಚಿಹ್ನೆಯ ಚಿತ್ರಗಳಿವೆ ಎಂದು ಆಯೋಗ ಹೇಳುತ್ತದೆ, ಆದರೆ ಇದುವರೆಗೆ ಯಾರಿಗೂ ಆ SLU ಒಳಗೆ ಏನಿದೆ ಎಂದು ಪರೀಕ್ಷಿಸಲು ಆಯೋಗ ಅವಕಾಶ ನೀಡಿಲ್ಲ.

ಕಂಟ್ರೋಲ್ ಯೂನಿಟ್‌ನಲ್ಲಿ ಫಲಿತಾಂಶದ ಎರಡು ಪ್ರತಿಗಳಿರುತ್ತವೆ ಮತ್ತು ಎರಡನೆಯ ಪ್ರತಿ ಬ್ಯಾಕಪ್ ಎಂದು (ECI) ಚುನಾವಣಾ ಆಯೋಗ ಹೇಳುತ್ತದೆ. ಆದರೆ ಯಂತ್ರವೇ ಹಾಳಾದರೆ ಬ್ಯಾಕಪ್ ಕೂಡ ನಾಶವಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಇದು ಒಳ್ಳೆಯ ಆಲೋಚನೆ ಅಲ್ಲ. ಈ ಎರಡನೇ ಪ್ರತಿ ಯಾವಾಗ ತಯಾರಾಗುತ್ತದೆ ಮತ್ತು ಎರಡೂ ಪ್ರತಿಗಳು ಒಂದೇ ಆಗಿವೆಯೇ ಎಂಬ ಪ್ರಶ್ನೆಗೆ ಆಯೋಗ ಉತ್ತರಿಸಿಲ್ಲ. ಒಂದು ವೇಳೆ ಎರಡು ಪ್ರತಿಗಳು ಭಿನ್ನವಾಗಿದ್ದರೆ, ಪರಿಶೀಲನೆಗೆ ಒಂದು ಪ್ರತಿಯನ್ನು ತೋರಿಸಿ, ಎಣಿಕೆಗೆ ಇನ್ನೊಂದು ಪ್ರತಿಯನ್ನು ಬಳಸುವ ಸಾಧ್ಯತೆ ಇರುತ್ತದೆ.

**ಚುನಾವಣಾ ಆಯೋಗ ಈ ವಿಚಾರದಲ್ಲಿ ಯಾವುದೇ ಪಾರದರ್ಶಕತೆ ತೋರಿಸಿಲ್ಲ ಮತ್ತು ಅದು ಯಾವುದಕ್ಕೂ ಸ್ಪಂದಿಸಿಲ್ಲ. ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ಯಾವುದೇ ಪ್ರಮುಖ ವಿಷಯಗಳಿಗೆ ಅವರು ಅರ್ಥಪೂರ್ಣವಾಗಿ ಉತ್ತರಿಸಿಲ್ಲ.**

***ಕಂಪ್ಯೂಟರ್ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಬಗ್ಗೆ ಮಿತವಾದ ಜ್ಞಾನವಿರುವ ಅಥವಾ ಜ್ಞಾನವೇ ಇಲ್ಲದ ಸಾಮಾನ್ಯ ಜನರಿಗೆ (ನನ್ನಂತಹವರಿಗೆ) ಇದರಿಂದ ತಿಳಿಯುವ ಒಂದು ಪ್ರಮುಖ ವಿಷಯವೆಂದರೆ - ಭಾರತೀಯ ಇವಿಎಂ (EVM) ವ್ಯವಸ್ಥೆಯಲ್ಲಿ ಸಾಮಾನ್ಯ ಜನರಿಗೆ ಎಂದಿಗೂ ತಿಳಿಯದ ಮತ್ತು ಅರ್ಥಮಾಡಿಕೊಳ್ಳಲು ಸಾಧ್ಯವಾಗದ, ಅನೇಕ ವಿಷಯಗಳು ನಡೆಯುತ್ತಿವೆ ಮತ್ತು ಮುಂದೆಯೂ ನಡೆಯಬಹುದು. ಈ ವ್ಯವಸ್ಥೆಗಳಿಗೆ ಪ್ರವೇಶ ಹೊಂದಿರುವ ಮತ್ತು ಇವುಗಳನ್ನು ನಿಯಂತ್ರಿಸುವ ವ್ಯಕ್ತಿಗಳು ಇವಿಎಂಗಳನ್ನು ವಂಚನೆಗೆ ಬಳಸಿಕೊಳ್ಳುವ ಸಾಧ್ಯತೆಗಳು ಈ ವ್ಯವಸ್ಥೆಗಳಲ್ಲಿ ಇವೆ. ಇದರಿಂದ ಚುನಾವಣಾ ಫಲಿತಾಂಶಗಳು ನಂಬಿಕೆಗೆ ಅತ್ಯಂತ ಅನರ್ಹವಾಗುವ ಸಾಧ್ಯತೆಗಳಿವೆ.***

**ಅಪಾರದರ್ಶಕ ಮತ್ತು ಹೊಣೆಗಾರಿಕೆಯಿಲ್ಲದ ಚುನಾವಣಾ ಆಯೋಗವು ದೇಶದ ಪ್ರಜಾಪ್ರಭುತ್ವಕ್ಕೆ, ಇಡೀ ದೇಶಕ್ಕೆ ಮತ್ತು ಅದರ ಮೂಲಕ “ಭಾರತದ ಪ್ರಜೆಗಳಾದ ನಮಗೆ” ಈ ಸಮಸ್ಯೆಯನ್ನು ಮತ್ತಷ್ಟು ಭೀಕರವಾಗಿಸಬಹುದು.**

## ಪ್ರೊ. ಯೋಗೇಂದ್ರ ಯಾದವ್ ಬಹಿರಂಗಪಡಿಸಿದ ಚುನಾವಣಾ ಆಯೋಗದ (ECI) ಬಿಹಾರ SIR ಡೇಟಾದಲ್ಲಿನ ಕೆಲವು ಅರ್ಥಹೀನ ಅಂಶಗಳು

ಚುನಾವಣಾ ನಿಯಮಗಳ ಪ್ರಕಾರ, ಮತದಾರರ ಪಟ್ಟಿಯಲ್ಲಿ ಇರುವ ಯಾರೊಬ್ಬರ ಹೆಸರನ್ನು ಮಾನ್ಯ ಕಾರಣಕ್ಕಾಗಿ ತೆಗೆದುಹಾಕಬೇಕೆಂದು ಯಾರಿಗಾದರೂ ಅನ್ನಿಸಿದರೆ, ಅದೇ ಮತಗಟ್ಟೆಯ ಮತ್ತೊಬ್ಬ ವ್ಯಕ್ತಿ “ಆಕ್ಷೇಪಣೆ” (Objection) ಸಲ್ಲಿಸಬಹುದು. ಅಗತ್ಯ ತನಿಖೆ ಮತ್ತು ಪ್ರಕ್ರಿಯೆಯ ನಂತರ ಸಂಬಂಧಿತ ಮತದಾರರ ಹೆಸರನ್ನು ತೆಗೆದುಹಾಕಬಹುದು. ಈ ರೀತಿ ತೆಗೆದುಹಾಕಲಾದ ಮತದಾರರ ಪಟ್ಟಿಯನ್ನು ಡೌನ್‌ಲೋಡ್ ಮಾಡಬಹುದಾಗಿದೆ. ಪ್ರೊ. ಯೋಗೇಂದ್ರ ಯಾದವ್ ಅವರ ತಂಡವು, SIR ಪ್ರಕ್ರಿಯೆಯಡಿ ಚುನಾವಣಾ ಆಯೋಗವು ಬಿಹಾರದಲ್ಲಿ ಮೊದಲ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿದ ನಂತರ, ತೆಗೆದು ಹಾಕಲಾದ ಹೆಸರುಗಳ ಪಟ್ಟಿಯನ್ನು ಡೌನ್‌ಲೋಡ್

ಮಾಡಿತ್ತು. ಆ ಪಟ್ಟಿಯಲ್ಲಿ, ಸಂಬಂಧಿತ ಮತದಾರರ ಹೆಸರು, ಆಕ್ಷೇಪಣೆ ಸಲ್ಲಿಸಿದ ವ್ಯಕ್ತಿಯ ಹೆಸರು, ಮತ್ತು ಆಕ್ಷೇಪಣೆಯ ಕಾರಣ-ಗಳನ್ನು, ದಾಖಲಿಸಲಾಗಿತ್ತು. ತಂಡವು ಪರಿಶೀಲಿಸಿದಾಗ, ಆ ಪಟ್ಟಿಯ ಪ್ರಕಾರ, ಅರ್ಧಕ್ಕಿಂತ ಹೆಚ್ಚು ಆಕ್ಷೇಪಣೆಗಳು (ಬಹುಪಾಲು) ಸಂಬಂಧಿತ ಮತದಾರರೇ ಸಲ್ಲಿಸಿದ್ದಾರಂತೆ. ಅಂದರೆ, ಒಬ್ಬ ವ್ಯಕ್ತಿ ತನ್ನ ಹೆಸರನ್ನು SIR ಮತದಾರರ ಪಟ್ಟಿಯಲ್ಲಿ ಸೇರಿಸಲು ನೋಂದಣಿ ಫಾರ್ಮ್ ಸಲ್ಲಿಸಿದ್ದಾರೆ, ಮತ್ತು ಕೆಲವು ವಾರಗಳ ಬಳಿಕ, ಅದೇ ವ್ಯಕ್ತಿ ತನ್ನದೇ ಹೆಸರಿನ ವಿರುದ್ಧ ಆಕ್ಷೇಪಣೆ ಸಲ್ಲಿಸಿ, ತನ್ನ ಹೆಸರನ್ನು ತೆಗೆದುಹಾಕುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ ಎಂಬುದಾಗಿ ದಾಖಲಾಗಿತ್ತು. ಇವು ಬಿಹಾರದಲ್ಲಿ ಕಂಡುಬಂದ ಬಹುಪಾಲು ಆಕ್ಷೇಪಣೆಗಳಾಗಿದ್ದವು. ಇನ್ನೂ ವಿಚಿತ್ರವೆಂದರೆ, ಇಂತಹ ಸ್ವಯಂ-ಆಕ್ಷೇಪಣೆಗಳಲ್ಲಿನ 100ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಕಾರಣವಾಗಿ "ವಿದೇಶಿ" (foreigner) ಎಂದು ದಾಖಲು ಆಗಿತ್ತು. ಅಂದರೆ, ಒಬ್ಬ ವ್ಯಕ್ತಿ ಮೊದಲು ಮತದಾರನಾಗಲು ಅರ್ಜಿ ಸಲ್ಲಿಸಿ, ಕೆಲವು ವಾರಗಳ ನಂತರ ತಾನೇ ವಿದೇಶಿಯೆಂದು ಹೇಳಿಕೊಂಡು ತನ್ನ ಹೆಸರನ್ನು ತೆಗೆದುಹಾಕುವಂತೆ ಮನವಿ ಮಾಡಿದ್ದಾರಂತೆ. ಸಾಮಾನ್ಯ ಜನರಿಗೆ ಇಂತಹ ಸಂಗತಿಗಳು ಅತೀ ಅರ್ಥಹೀನವಾಗಿ ಕಾಣಿಸುವುದಿಲ್ಲವೇ? ಆದರೆ, ಈ ವಿಚಿತ್ರಗಳ ಬಗ್ಗೆ ಚುನಾವಣಾ ಆಯೋಗವು ಯಾವುದೇ ಅರ್ಥಪೂರ್ಣ ಸ್ಪಷ್ಟೀಕರಣ ನೀಡಿಲ್ಲ.

ಪ್ರೊ. ಯಾದವ್ ಅವರ ತಂಡ ನಡೆಸಿದ ಪರಿಶೋಧನೆಯ ಪ್ರಕಾರ, ಬಿಹಾರದಲ್ಲಿ ನಡೆಸಿದ ಸಂಪೂರ್ಣ SIR ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗಕ್ಕೆ ವಿದೇಶಿಗಳೆಂದು ಪತ್ತೆಯಾದ ಮತದಾರರು ಕೇವಲ ಮೂವರು (3) ಮಾತ್ರ.

ಬಿಹಾರದಲ್ಲಾಗಲಿ ಅಥವಾ ಇತರೆ ಯಾವುದೇ ರಾಜ್ಯದಲ್ಲಾಗಲಿ, SIR ಪ್ರಕ್ರಿಯೆಯಲ್ಲಿ ಪತ್ತೆಯಾದ ವಿದೇಶಿಗಳ ಸಂಖ್ಯೆಯನ್ನು ಚುನಾವಣಾ ಆಯೋಗವು ಅಧಿಕೃತವಾಗಿ ಇನ್ನೂ ಪ್ರಕಟಿಸಿಲ್ಲ.

ಚುನಾವಣಾ ನಿಯಮಗಳ ಪ್ರಕಾರ, ಮತದಾರರ ಪಟ್ಟಿಯಲ್ಲಿರುವ ಯಾವುದೇ ಹೆಸರಿನ ವಿರುದ್ಧ ಆಕ್ಷೇಪಣೆ ಸಲ್ಲಿಸಲು ಅದೇ ಮತಗ-ಟ್ಟೆಯ ಮತದಾರನಿಗಷ್ಟೇ ಅಧಿಕಾರ ಇದೆ. ಆದರೆ ಅನೇಕ ಬಾರಿ, ತಮ್ಮ ಹೆಸರಿನಲ್ಲಿ ಆಕ್ಷೇಪಣೆ ಸಲ್ಲಿಸಲಾಗಿದೆ ಎನ್ನಲಾದ ವ್ಯಕ್ತಿಗೆ ಅದರ ಬಗ್ಗೆ ತಿಳಿದೇ ಇರುವುದಿಲ್ಲ. ಅವರು ಯಾವುದೇ ಆಕ್ಷೇಪಣೆ ಸಲ್ಲಿಸಿರಲಿಲ್ಲ. ಮೇಲ್ನೋಟಕ್ಕೆ ಈ ಅಕ್ರಮದ ಹಿಂದೆ ಇರುವವರು ಕಂಪ್ಯೂ-ಟರ್‌ಗಳ ಮೂಲಕ ನಕಲಿ ಆಕ್ಷೇಪಣೆಗಳನ್ನು ಸೃಷ್ಟಿಸುತ್ತಿದ್ದಾರೆ.

## ನಡೆಯುತ್ತಿರುವ ಪಶ್ಚಿಮ ಬಂಗಾಳದ SIR ನಲ್ಲಿ ಆಗಿರುವ ಗಂಭೀರ ಸಮಸ್ಯೆಗಳು

12 ಏಪ್ರಿಲ್ 2026ರ ಹೊತ್ತಿಗೆ, ಪಶ್ಚಿಮ ಬಂಗಾಳದಲ್ಲಿ ಒಟ್ಟು ಸುಮಾರು 91 ಲಕ್ಷ ಹೆಸರುಗಳನ್ನು ತೆಗೆದು ಹಾಕಲಾಗಿತ್ತು. ಇವುಗಳಲ್ಲಿ ಸುಮಾರು 58 ಲಕ್ಷ ಹೆಸರುಗಳನ್ನು ನಿಗದಿತ ದಿನಾಂಕದೊಳಗೆ ನೋಂದಣಿ ಫಾರ್ಮ್ ಸಲ್ಲಿಸದ ಕಾರಣಕ್ಕಾಗಿ ತೆಗೆದು ಹಾಕಲಾಗಿತ್ತು. ನಂತರ ಇನ್ನೊಂದು 8 ಲಕ್ಷ ಹೆಸರುಗಳನ್ನು ತೆಗೆದು ಹಾಕಲಾಯಿತು. ಇದರ ಜೊತೆಗೆ, 2002 ಮತ್ತು 2025ರ ಮತದಾರರ ಪಟ್ಟಿಗಳನ್ನು ಹೋಲಿಸುವಾಗ ECI ಬಳಸುವ ಒಂದು ತಂತ್ರಾಂಶದ ಪ್ರಕಾರ, "ತಾರ್ಕಿಕ ವ್ಯತ್ಯಾಸಗಳ" ("Logical Discrepancies") ಆಧಾರದ ಮೇಲೆ ಸುಮಾರು 60 ಲಕ್ಷ ಮತದಾರರನ್ನು "ವಿಚಾರಣಾ ಹಂತದಲ್ಲಿ" ("Under Adjudication") ಎಂದು ವರ್ಗೀಕರಿಸಲಾಗಿದೆ. ಉದಾಹರಣೆಗೆ: ಒಂದು ಪಟ್ಟಿಯಲ್ಲಿ ಹೆಸರು "ರಮೇಶ್" ಎಂದಿದ್ದರೆ, ಇನ್ನೊಂದು ಪಟ್ಟಿಯಲ್ಲಿ "ರಮೇಶ" ಅಥವಾ "ರಮೇಶಪ್ಪ" ಎಂದಿರಬಹುದು ಅಥವಾ "ರಮಾಶ್" ಎಂಬ ಕಾಗುಣಿತ ತಪ್ಪು ಇರಬಹುದು. ಮತದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸಿದರೂ ಸಹ, ವಿಚಾರಣೆಯ ನಂತರ ಸುಮಾರು 27 ಲಕ್ಷ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಯಿತು. ಅನ್ಯಾಯಕ್ಕೊಳಗಾದ ಮತದಾರರು ಹೊಸದಾಗಿ ಸ್ಥಾಪಿಸಲಾದ ನ್ಯಾಯಮಂಡಳಿಗಳಿಗೆ (Tribunals) ಮೇಲ್ಮನವಿ ಸಲ್ಲಿಸಬಹುದು ಎಂದು ತಿಳಿಸಲಾಯಿತು. ಈ ನಡುವೆ, ಈ 27 ಲಕ್ಷ ಮತದಾರರು ನಿಗದಿತ ಚುನಾವಣಾ ದಿನಾಂಕಗಳಿಗಿಂತ (23 ಮತ್ತು 27 ಏಪ್ರಿಲ್ 2026) ಕನಿಷ್ಠ 2 ದಿನಗಳ ಮೊದಲು ನ್ಯಾಯಮಂಡಳಿಯು ಅವರ ಹೆಸರನ್ನು ಸೇರಿಸದ ಹೊರತು, ಅವರ ಹೆಸರು 2025ರ ಮತದಾರರ ಪಟ್ಟಿಯಲ್ಲಿ ಇದ್ದರೂ ಕೂಡ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅವರು ಮತ ಚಲಾಯಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಈ 27 ಲಕ್ಷ ಮತದಾರರು ಶಾಶ್ವತವಾಗಿ ತಮ್ಮ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು ಇದರ ಅರ್ಥವಲ್ಲ, ನ್ಯಾಯಮಂಡಳಿಯ ತೀರ್ಪಿಗಾಗಿ ಅವರು ಕಾಯಬೇಕು, ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಇದು ತೆಗೆದು ಹಾಕಲ್ಪಟ್ಟ ಮತದಾರರಿಗೆ ನ್ಯಾಯವೇ?

ನಮಗೆ ತಿಳಿದಿರುವ ಮಾಹಿತಿಯಂತೆ, ಪಶ್ಚಿಮ ಬಂಗಾಳದಲ್ಲಿ ಅಕ್ರಮವಾಗಿ ಹೆಸರು ತೆಗೆದು ಹಾಕಿರುವುದರ ವಿರುದ್ಧ ಸುಮಾರು 35 ಲಕ್ಷ ಜನರು ಮೇಲ್ಮನವಿ ಸಲ್ಲಿಸಿದ್ದಾರೆ. ಇವೆಲ್ಲವೂ ಯಾವಾಗ ಬಗೆಹರಿಯುತ್ತವೆ ಎಂಬುದು ಯಾರಿಗೂ ತಿಳಿದಿಲ್ಲ.

ಭಾರತದಾದ್ಯಂತ ಲಕ್ಷಾಂತರ ಅಥವಾ ಕೋಟ್ಯಂತರ ಜನರಿಗೆ ತಮ್ಮ ಹೆಸರುಗಳು ಮತದಾರರ ಪಟ್ಟಿಯಿಂದ ತೆಗೆದು ಹಾಕಿರುವುದೇ ತಿಳಿದಿಲ್ಲ. ತೆಗೆದು ಹಾಕಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಗೂ ಈ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ನೀಡುವ ವ್ಯವಸ್ಥೆ ಚುನಾವಣಾ ಆಯೋಗದ ಬಳಿ ಇಲ್ಲ. ಹೀಗಾಗಿ, ಅವರಿಗೆ ಮೇಲ್ಮನವಿ ಸಲ್ಲಿಸಲು ಸಹ ಯಾವುದೇ ದಾರಿಯಿಲ್ಲ.

ಪ್ರಶ್ನೆಯೇನೆಂದರೆ, ಸಂಪೂರ್ಣ ತನಿಖೆ ನಡೆಸಿ ಪ್ರತಿಯೊಬ್ಬ ಮತದಾರನಿಗೂ ನ್ಯಾಯ ಸಿಗುವಂತೆ ಪಾರದರ್ಶಕವಾದ ಅಂತಿಮ ಮತದಾರರ ಪಟ್ಟಿಯನ್ನು ತಯಾರಿಸಲು ಚುನಾವಣಾ ಆಯೋಗವು ಸಾಕಷ್ಟು ಸಮಯವನ್ನು ಮೀಸಲಿಡದಿದ್ದ ಮೇಲೆ, ಅಂತಹ ಸಂದರ್ಭದಲ್ಲಿ ಚುನಾವಣೆಗಳನ್ನು ನಡೆಸಬೇಕೇ? ಪರ್ಯಾಯವಾಗಿ, ಒಂದು ನಿರ್ದಿಷ್ಟ ಸಮಯದಲ್ಲಿ ಚುನಾವಣೆ ನಡೆಯಲೇಬೇಕು ಎಂದಿದ್ದರೆ, SIR ನಂತಹ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮತ್ತು ಎಲ್ಲಾ ಮತದಾರರಿಗೆ ಸಂಪೂರ್ಣ ನ್ಯಾಯ ಒದಗಿಸಲು ಅವಶ್ಯವಿದ್ದಷ್ಟು ಸಮಯವಿಲ್ಲದಿದ್ದರೂ ಆಯೋಗವು SIR ನಂತಹ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಬೇಕೇ?

## SIR ಪ್ರಕ್ರಿಯೆಯಲ್ಲಿ "ಅಡ್ಜುಡಿಕೇಶನ್" (ನ್ಯಾಯನಿರ್ಣಯ) ಎಂಬ ನಿಗೂಢತೆ

ಭಾರತದಲ್ಲಿ ನ್ಯಾಯಾಲಯದ ಪ್ರಕರಣಗಳನ್ನು ಎದುರಿಸಿದ ಯಾರಿಗಾದರೂ ತಿಳಿದಿರುವಂತೆ, ಒಂದು ಪ್ರಕರಣದ ವಿಚಾರಣೆ ನಡೆಸಿ ಅಂತಿಮ ತೀರ್ಪು ನೀಡಲು ಕೋರ್ಟ್‌ಗಳು ಎಷ್ಟು ಸಮಯ ತೆಗೆದುಕೊಳ್ಳುತ್ತವೆ ಎಂಬುದು ಎಲ್ಲರಿಗೂ ಗೊತ್ತು. ತೀರಾ ಸರಳವಾದ ವಿವಾದಗಳೂ ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುತ್ತವೆ. ಎಷ್ಟೋ ಪ್ರಕರಣಗಳು ದಶಕಗಳ ಕಾಲವೂ ನಡೆಯುತ್ತವೆ.

SIR ನಲ್ಲಿ ನಿರ್ಧರಿಸಲಾಗುತ್ತಿರುವುದು ಒಬ್ಬ ವ್ಯಕ್ತಿಯು ಭವಿಷ್ಯದಲ್ಲಿ ಮತದಾರನಾಗಿ ಮುಂದುವರಿಯಬೇಕೇ ಅಥವಾ ಬೇಡವೇ ಎಂಬುದನ್ನು. ಪ್ರಜಾಪ್ರಭುತ್ವದಲ್ಲಿ, ಮತ ಚಲಾವಣೆಯ ಹಕ್ಕು ಒಬ್ಬ ವ್ಯಕ್ತಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳ ಅಸ್ತಿತ್ವದೊಂದಿಗೆ ಬೆಸೆದುಕೊಂಡಿದೆ. ಸಾಮಾನ್ಯ ಸಿವಿಲ್ ಕೋರ್ಟ್ ಪ್ರಕರಣಗಳಲ್ಲಿ ಅಂತಿಮ ತೀರ್ಮಾನದಿಂದ ಆಗಬಹುದಾದ ಲಾಭ-ನಷ್ಟಗಳಿಗೆ ಹೋಲಿಸಿದರೆ, SIR ನ ನ್ಯಾಯನಿರ್ಣಯದ ಅಂತಿಮ ಫಲಿತಾಂಶದಿಂದ ಆಗಬಹುದಾದ ಲಾಭ-ನಷ್ಟಗಳು ನಿಜವಾಗಿಯೂ, ಆ ವ್ಯಕ್ತಿಗೆ ಅತ್ಯಂತ ಬೃಹತ್ ಪ್ರಮಾಣದ್ದು.

ಪಶ್ಚಿಮ ಬಂಗಾಳದ SIR ನಲ್ಲಿ, ಕೇವಲ ಕೆಲವು ವಾರಗಳ ಅವಧಿಯಲ್ಲಿ ಸುಮಾರು 60 ಲಕ್ಷ ಪ್ರಕರಣಗಳನ್ನು ವಿಚಾರಣೆ ನಡೆಸಲು 250 ರಿಂದ 900 ನ್ಯಾಯಾಂಗ ಅಧಿಕಾರಿಗಳನ್ನು (ನ್ಯಾಯಾಧೀಶರನ್ನು) ನೇಮಿಸಲಾಗಿತ್ತು. ಇದರರ್ಥ, ಒಬ್ಬೊಬ್ಬ ನ್ಯಾಯಾಧೀಶರೂ ಕೆಲವೇ ವಾರಗಳ ಅವಧಿಯಲ್ಲಿ ಸರಾಸರಿ 6,000 ದಿಂದ 10,000 ಪ್ರಕರಣಗಳನ್ನು ವಿಚಾರಣೆ ನಡೆಸಿ ತೀರ್ಪು ನೀಡಬೇಕಿತ್ತು.

***ಈ ತೀರ್ಪುಗಳು ಸಂಬಂಧಪಟ್ಟ ವ್ಯಕ್ತಿಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದ ಮೇಲೆ ಬೀರುವ ಆಳವಾದ ಪರಿಣಾಮಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ಪ್ರಕರಣಗಳಿಗೆ ನ್ಯಾಯ ಒದಗಿಸಲು ಮನುಷ್ಯರಿಗೆ ಸಾಧ್ಯವೇ ?***

## SIR ಅಂದರೆ ಏನು ? ಉದ್ದೇಶ ಏನು ? ಅರ್ಥ ಏನು ?

ಪ್ರೊ. ಯೋಗೇಂದ್ರ ಯಾದವ್ ಇದನ್ನು ಈ ಕೆಳಗಿನಂತೆ ವಿವರಿಸುತ್ತಾರೆ – SIR ಈ ಕೆಳಗಿನ ಯಾವುದೂ ಅಲ್ಲ:

ಇದು ಮತದಾರರ ಪಟ್ಟಿಯ ಪರಿಷ್ಕರಣೆ ಅಲ್ಲ.

ಇದು ಈ ಹಿಂದೆ ಎಂದೂ ಮಾಡಲಾದ ಯಾವುದೇ ಪ್ರಕ್ರಿಯೆ ಅಲ್ಲ.

ಇದು ಮತದಾರರ ಪಟ್ಟಿಯ ಸ್ವಚ್ಛಗೊಳಿಸುವಿಕೆ ಅಲ್ಲ.

ಇದು ಮತದಾರರ ಪಟ್ಟಿಯಿಂದ "ವಿದೇಶಿಯರನ್ನು" ಹೊರಗಿಡುವ ಬಗ್ಗೆ ಅಲ್ಲ.

**ಇದು ಸಂಪೂರ್ಣವಾಗಿ ಈ SIR ಪ್ರಕ್ರಿಯೆಯ ಹಿಂದೆ ಇರುವವರ ಪರವಾಗಿ ಚುನಾವಣಾ ಫಲಿತಾಂಶಗಳನ್ನು ಬರುವಂತೆ ವಿನ್ಯಾಸಗೊಳಿಸಲಾದ ಒಂದು ಅಪ್ರಾಮಾಣಿಕ ಮತದಾರರ ಪಟ್ಟಿಯನ್ನು ರಚಿಸುವ ಪ್ರಕ್ರಿಯೆಯಾಗಿದೆ.**

## ಈ ಇಡೀ SIR ವ್ಯವಹಾರದಲ್ಲಿ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ಒಂದು ಮೂಲಭೂತ ಅಂಶ:

18 ವರ್ಷ ಮೇಲ್ಪಟ್ಟ, ಸಾಮಾನ್ಯವಾಗಿ ಭಾರತದಲ್ಲಿ ವಾಸಿಸುತ್ತಿರುವ, ತಾನು ಭಾರತೀಯ ಎಂದು ಪ್ರತಿಪಾದಿಸುವ ಒಬ್ಬ ವ್ಯಕ್ತಿಯು ಈಗಾಗಲೇ ಮತದಾರನಾಗಿದ್ದರೆ ಅಥವಾ ನಿಯಮಗಳ ಪ್ರಕಾರ ಹೊಸದಾಗಿ ಮತದಾರರಾಗಲು ಅರ್ಹನಾಗಿದ್ದರೆ ಮತ್ತು ಆತ ವಿದೇಶಿ ಪ್ರಜೆ ಎಂದು ಸಾಬೀತು ಆಗಿಲ್ಲದಿದ್ದರೆ, ಅಂತಹ ವ್ಯಕ್ತಿಗೆ SIR ಅಡಿಯಲ್ಲಿ ಮತ ಚಲಾವಣೆ ಹಕ್ಕನ್ನು ನಿರಾಕರಿಸಿದರೆ, ನಮ್ಮ ದೇಶದಲ್ಲಿ ಅಂತಹ ವ್ಯಕ್ತಿಯ ಸ್ಥಾನಮಾನ ಮತ್ತು ಒಬ್ಬ ಮನುಷ್ಯನಾಗಿ ಆತನ ಸ್ಥಾನಮಾನ ಏನು? ಅಂತಹ ವ್ಯಕ್ತಿಯೂ ಕೂಡ ಒಂದು ಮನುಷ್ಯ, ಮತ್ತು ಎಲ್ಲಾ ಮನುಷ್ಯರೂ ಇರಬೇಕಾಗಿರುವ ಹಾಗೇ, ಆ ವ್ಯಕ್ತಿ ಕೂಡ ನಮ್ಮ ಸಹೋದರ/ ಸಹೋದರಿಯ ರೀತಿಯೇ, ಎಂದರೆ, ಅದನ್ನು ಯಾರೂ ನಿರಾಕರಿಸಲು ಆಗುವುದಿಲ್ಲ, ಎಂದು ನಾನು ನಂಬಿದ್ದೇನೆ. ವಿದೇಶೀಯ ಎಂದು ಸಾಬೀತು ಆಗದಿದ್ದರೆ, ಸಾಬೀತು ಆಗುವವರೆಗೂ ಆ ವ್ಯಕ್ತಿಯನ್ನು ಭಾರತೀಯ ಎಂದು ಪರಿಗಣಿಸಬಾರದೇ? ಹೌದು ಎಂದಾದರೆ, ಆ ವ್ಯಕ್ತಿಗೆ ಮತದಾನದ ಹಕ್ಕನ್ನು ನಿರಾಕರಿಸುವುದು ಅವರ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆ ಮತ್ತು ಪ್ರಜಾಪ್ರಭುತ್ವದ ಮೂಲಭೂತ ತತ್ವಗಳ ಉಲ್ಲಂಘನೆಯಲ್ಲವೇ?

ಅಂತಹ ವ್ಯಕ್ತಿಯನ್ನು "ದೇಶವೇ ಇಲ್ಲದ ವ್ಯಕ್ತಿ" ("Stateless Person") ಎಂದು ಪರಿಗಣಿಸಬೇಕೆ ? ಅದರೊಂದಿಗೆ ಬರುವ ಎಲ್ಲಾ ಕ್ರೌರ್ಯಗಳನ್ನು, ತನ್ನ ಯಾವುದೇ ತಪ್ಪಿಲ್ಲದೇ, ಆ ವ್ಯಕ್ತಿ ಅನುಭವಿಸುವಂತೆ ಮಾಡುವುದು ಸರಿಯೇ?

ಅನ್ಯತಾ ಸಾಬೀತಾಗುವವರೆಗೆ ಅಂತಹ ಎಲ್ಲಾ ವ್ಯಕ್ತಿಗಳನ್ನು, ಭಾರತೀಯರು ಎಂದು ಪರಿಗಣಿಸಬೇಕು ಮತ್ತು ಅವರ ಮತದಾನದ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂದು ನಾನು ನಂಬುತ್ತೇನೆ. ವೈಯಕ್ತಿಕ, ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ಅದೇ ಸರಿಯಾದ ದಾರಿ. ನಮ್ಮ ದೇಶದ ಕಾನೂನು ಕೂಡ ಅದನ್ನೇ ಹೇಳುತ್ತದೆ ಎಂದು ನಾನು ತಿಳಿದಿದ್ದೇನೆ. ಪ್ರಸ್ತುತ ಬಿಜೆಪಿ ನಿಯಂತ್ರಿತ

ಚುನಾವಣಾ ಆಯೋಗವು ಎಲ್ಲಾ ನೀತಿಗಳು, ನೈತಿಕತೆ ಮತ್ತು ನಮ್ಮದೇ ಕಾನೂನನ್ನು ಉಲ್ಲಂಘಿಸುತ್ತಿದೆ ಮತ್ತು ನಮ್ಮ ದೇಶದ ಕೋಟ್ಯಾಂತರ ಜನರನ್ನು ಅಪಾರ ದುಃಖ ಮತ್ತು ಸಂಕಟಕ್ಕೆ ದೂಡುತ್ತಿದೆ. ಈ ದುಃಖ ಮತ್ತು ಸಂಕಟವು ಮುಂದೆ ಇನ್ನಷ್ಟು ಹೆಚ್ಚಾಗುವ ಮತ್ತು ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿಯುವ ಸಾಧ್ಯತೆಯಿದೆ.

## ಮತದಾರರ ಪಟ್ಟಿ ಅಕ್ರಮಗಳ ಬಗ್ಗೆ ಕಾಲಕಾಲದ  ವರದಿಗಳು

SIR ಗಿಂತ ಮೊದಲು ಕೂಡ, ನಿಖರತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಇರುವ ಚುನಾವಣಾ ಆಯೋಗದ ಸ್ವಂತ ಕಾರ್ಯವಿಧಾನಗಳನ್ನು ಉಲ್ಲಂಘಿಸಿ, ಮತದಾರರ ಪಟ್ಟಿಗೆ ನಕಲಿ ಮತದಾರರನ್ನು ಸೇರಿಸುವ ಮತ್ತು ಅಸಲಿ ಮತದಾರರನ್ನು ತೆಗೆದುಹಾಕುವ ಬಗ್ಗೆ ಆಗಾಗ  ವರದಿಗಳು ಬಂದಿವೆ.

SIR ಪ್ರಕ್ರಿಯೆಯ ಸಮಯದಲ್ಲೂ ಕೂಡ, ECI, ಮತದಾರರ ಪಟ್ಟಿಯ ನಿಖರತೆ ಮತ್ತು ಹೊಣೆಗಾರಿಕೆಯ ದೃಷ್ಟಿಯಿಂದ, ತಾನೇ ರೂಪಿಸಿರುವ ನಿಯಮಗಳ ಉಲ್ಲಂಘನೆ ಮಾಡಿ, ಕೆಲವು ಜನರು ಸಾವಿರಾರು ನಕಲಿ ಮತದಾರರನ್ನು ECI ಮೂಲಕವೇ ಸೇರಿಸುತ್ತಿದ್ದಾರೆ ಎಂಬ ವರದಿಗಳು ಬಂದಿವೆ.

ಅದೇ ರೀತಿ, ನಿಖರತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ರೂಪಿಸಿರುವ ಪ್ರಕ್ರಿಯೆಗಳನ್ನು ಉಲ್ಲಂಘಿಸಿ, ಮೋಸದಿಂದ, ‹ಫಾರ್ಮ್7-› ಅನ್ನು ಬಳಸಿಕೊಂಡು ಅಂತಿಮ SIR ಪಟ್ಟಿಗಳಿಂದ ಹೆಸರುಗಳನ್ನು ತೆಗೆದು ಹಾಕಿ ವಂಚಿಸಿರುವ ಬಗ್ಗೆಯೂ ಆಗಾಗ್ಗೆ ವರದಿಗಳು ಬಂದಿವೆ.

ಇದಲ್ಲದೆ, ಅನೇಕ ಜನರು ಕಾಲಕಾಲಕ್ಕೆ ಚುನಾವಣಾ ಆಯೋಗದ ನಡತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದಾಗ, ಆಯೋಗವು ಸಾಮಾನ್ಯವಾಗಿ ಮೌನವಾಗಿರುವುದು ಅಥವಾ ಮುಖ್ಯ ಪ್ರಶ್ನೆಗಳನ್ನು ತಪ್ಪಿಸಿ ಹಾರಿಕೆಯ ಉತ್ತರಗಳನ್ನು ನೀಡುವುದು, ECI ನ ಟ್ರ್ಯಾಕ್ ರೆಕಾರ್ಡ್ ಆಗಿದೆ.

## ಪ್ರಸ್ತುತ ಸಂದರ್ಭದಲ್ಲಿ ನಮ್ಮ ನ್ಯಾಯಾಂಗವು (ಸುಪ್ರೀಂ ಕೋರ್ಟ್) ಹೇಗೆ ಕೆಲವು ರೀತಿ ಪ್ರಜಾಪ್ರಭುತ್ವವನ್ನು ರಕ್ಷಿಸಬಹುದಾಗಿತ್ತು, ಆದರೂ ಹೇಗೆ ರಕ್ಷಿಸುವಲ್ಲಿ ವಿಫಲವಾಗಿದೆ.

ಅಧಿಕಾರದಲ್ಲಿರುವ ಒಕ್ಕೂಟ ಸರ್ಕಾರವೇ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಪದ್ಧತಿಯ ವಿರುದ್ಧ 2015 ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (PIL) ಸಲ್ಲಿಸಲಾಗಿತ್ತು. ಇದು ಚುನಾವಣಾ ಪ್ರಕ್ರಿಯೆಯಲ್ಲಿ ನೇರವಾದ ಮತ್ತು ಗಂಭೀರವಾದ ಹಿತಾಸಕ್ತಿ ಸಂಘರ್ಷಕ್ಕೆ (Conflict of interest) ಕಾರಣವಾಗುತ್ತದೆ ಎಂಬ ಆತಂಕವಿತ್ತು. ಈ ಪ್ರಕರಣವನ್ನು ನಿರ್ಧರಿಸಲು ಸುಪ್ರೀಂ ಕೋರ್ಟ್ ಎಂಟು ವರ್ಷಗಳನ್ನು ತೆಗೆದುಕೊಂಡಿತು. ಮಾರ್ಚ್ 2023 ರಲ್ಲಿ ಅದು ತೀರ್ಪು ನೀಡಿ, ಸಂಸತ್ತು ಸೂಕ್ತ ಕಾನೂನನ್ನು ರೂಪಿಸುವವರೆಗೆ ಪ್ರಧಾನ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ, ಮೂವರು ಸದಸ್ಯರ ಸಮಿತಿಯು ಈ ಆಯ್ಕೆಯನ್ನು ಮಾಡಬೇಕು ಎಂದು ಆದೇಶಿಸಿತು. ನಮ್ಮ ಪ್ರಜಾಪ್ರಭುತ್ವದ ಸಮಗ್ರತೆಗೆ ಈ ವಿಷಯವು ಅತ್ಯಂತ ನಿರ್ಣಾಯಕವಾಗಿ ಇದ್ದುದರಿಂದ ಮತ್ತು ಯಾರು ಬೇಕಾದರೂ ಸುಲಭವಾಗಿ ಗುರುತಿಸಬಹುದಾದ ಅತೀ ದೊಡ್ಡ ಹಿತಾಸಕ್ತಿ ಸಂಘರ್ಷ ಇದ್ದುದರಿಂದ, ಸುಪ್ರೀಂ ಕೋರ್ಟ್ ಈ ಪ್ರಕರಣವನ್ನು ಬೇಗ ನಿರ್ಣಯಿಸಬಹುದಾಗಿತ್ತೇ? ಪ್ರಾಯಶಃ, ಆರು ತಿಂಗಳೊಳಗೆ ಅಥವಾ ಅದಕ್ಕಿಂತ ಕಡಿಮೆ ಅವಧಿಯಲ್ಲಿ ನಿರ್ಧರಿಸಬಹುದಾಗಿತ್ತೇ?  ಆದರೆ ಅದು ಹಾಗೆ ಮಾಡಲಿಲ್ಲ.

ಮಾರ್ಚ್ 2023 ರ ಮೇಲಿನ ತೀರ್ಪಿಗೆ ಪ್ರತಿಕ್ರಿಯೆಯಾಗಿ, ಮೋದಿ-ಬಿಜೆಪಿ ಪ್ರಾಬಲ್ಯದ ಸಂಸತ್ತು ಡಿಸೆಂಬರ್ 2023 ರಲ್ಲಿ ಹೊಸ ಕಾನೂನು ಮಾಡಿತು. ಈ ಕಾನೂನಿನ ಪ್ರಕಾರ, ಚುನಾವಣಾ ಆಯುಕ್ತರ ಆಯ್ಕೆಯನ್ನು, ಪ್ರಧಾನಮಂತ್ರಿಗಳು, ಅವರೇ ಆಯ್ಕೆ ಮಾಡುವ ಒಬ್ಬರು ಕ್ಯಾಬಿನೇಟ್ ಸಚಿವರು, ಮತ್ತು ವಿರೋಧ ಪಕ್ಷದ ನಾಯಕರು ಸೇರಿದ ಮೂರು ಸದಸ್ಯರ ಸಮಿತಿಯು ಮಾಡುತ್ತದೆ. ಹೀಗಾಗಿ, ಅಂತಿಮ ನಿರ್ಧಾರ ಪ್ರಧಾನ ಮಂತ್ರಿಗಳ ಕೈಯಲ್ಲಿ ಇರುತ್ತೆ. ಯಾವುದೇ ಸಾಮಾನ್ಯ ವ್ಯಕ್ತಿಗೆ ಇದು ಸ್ಪಷ್ಟವಾಗಿ ಅನ್ಯಾಯದ ಕಾನೂನು ಎಂದು ತಿಳಿಯುತ್ತದೆ. ಕೂಡಲೇ ಈ ಕಾನೂನನ್ನು ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಲಾಯಿತು. ಈಗ 2026 ರಲ್ಲಿ ಸುಪ್ರೀಂ ಕೋರ್ಟ್ ಈ ಪ್ರಕರಣದ ವಿಚಾರಣೆಯನ್ನು ಇನ್ನೂ ನಡೆಸುತ್ತಿದೆ. ಇತ್ತೀಚಿನ ಪತ್ರಿಕಾ ವರದಿ ಪ್ರಕಾರ, ಈ ಪ್ರಕರಣವನ್ನು ಯಾವ ಪೀಠವು ವಿಚಾರಣೆ ನಡೆಸಬೇಕು ಎಂಬುದನ್ನು ನಿರ್ಧರಿಸಲಾಗುತ್ತಿದೆ. ಈ ಪ್ರಕರಣದ ಅಂತಿಮ ವಿಲೇವಾರಿ ಬಾಕಿ ಇರುವಾಗ, ಆ ಕಾನೂನಿನ ಅನುಷ್ಠಾನಕ್ಕೆ ಯಾವುದೇ ತಡೆಯಾಜ್ಞೆಯನ್ನು ನೀಡಿಲ್ಲ. ಪರಿಣಾಮವಾಗಿ, ಬಿಜೆಪಿ ಸರ್ಕಾರವೇ ಚುನಾವಣಾ ಆಯುಕ್ತರನ್ನು ನೇಮಿಸುವುದನ್ನು ಮುಂದುವರಿಸಿದೆ. ಈ ಗಂಭೀರ ಹಿತಾಸಕ್ತಿ ಸಂಘರ್ಷ ಇನ್ನೂ ಮುಂದುವರಿಯುತ್ತಿದೆ. ಸುಪ್ರೀಂ ಕೋರ್ಟ್ ಈ ಕಾನೂನಿಗೆ ತಡೆಯಾಜ್ಞೆ ನೀಡಬಹುದಿತ್ತು, ಈಗಲೂ ನೀಡಬಹುದು, ಆದರೆ ಅದು ನೀಡಿಲ್ಲ.

ಚುನಾವಣಾ ಆಯೋಗವು SIR ಪ್ರಕ್ರಿಯೆಯನ್ನು ಘೋಷಿಸಿದಾಗ, ಇದು ಪ್ರಜಾಪ್ರಭುತ್ವದ ಮೂಲಭೂತ ಮತ್ತು ಕೇಂದ್ರೀಯ ಆಶಯಗಳಿಗೆ ವಿರುದ್ಧವಾಗಿದೆ ಎಂದು PIL ಗಳನ್ನು ಸಲ್ಲಿಸಲಾಯಿತು. ಬಿಹಾರದಲ್ಲಿ SIR ಪ್ರಕ್ರಿಯೆ ನಡೆಯುತ್ತಿದ್ದಾಗ, ಅರ್ಜಿದಾರರು (ಶ್ರೀ ಯೋಗೇಂದ್ರ ಯಾದವ್ ಮುಂತಾದವರು) ಅಂತಿಮ ಮತದಾರರ ಪಟ್ಟಿ ಎಷ್ಟು ದೋಷಪೂರಿತವಾಗಿದೆ ಎಂಬುದಕ್ಕೆ ಪುರಾವೆಗಳನ್ನು ನೀಡಿದರು. ಇದಕ್ಕೆ ಚುನಾವಣಾ ಆಯೋಗದ ಬಳಿ ಉತ್ತರಗಳಿಲ್ಲದಿದ್ದರೂ, ಸುಪ್ರೀಂ ಕೋರ್ಟ್ ಆ ದೋಷಪೂರಿತ ಪಟ್ಟಿಯನ್ನೇ ಬಳಸಿ ಬಿಹಾರದಲ್ಲಿ ಚುನಾವಣೆ ನಡೆಸಲು ಅವಕಾಶ ನೀಡಿತು, ಮತ್ತು SIR ವಿರುದ್ಧದ ವಿಚಾರಣೆಯನ್ನು ಮುಂದುವರಿಸಿತು. ಈ ನಡುವೆ SIR ಪ್ರಕ್ರಿಯೆಗೆ ತಡೆಯಾಜ್ಞೆ ನೀಡಲಿಲ್ಲ. ಈ ಪ್ರಕರಣದ ಅಂತಿಮ ತೀರ್ಪು ಬರಲು ಇನ್ನೂ ಹಲವು ತಿಂಗಳುಗಳು ಅಥವಾ ವರ್ಷಗಳೇ ಬೇಕಾಗಬಹುದು. ಈ ಅಂತರದಲ್ಲಿ, ಈ SIR ಪ್ರಕ್ರಿಯೆಯು ಭಾರತೀಯ ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದರಲ್ಲಿ ತೊಡಗಿದೆ. ಇಲ್ಲಿಯೂ ಸುಪ್ರೀಂ ಕೋರ್ಟ್ ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಲು ವಿಫಲವಾಗಿದೆ.

ಪಶ್ಚಿಮ ಬಂಗಾಳದಲ್ಲಿ "ವಿಚಾರಣೆ" ("Adjudication") ಇತ್ಯಾದಿಗಳ ನಂತರ ಸುಮಾರು 27 ಲಕ್ಷದಿಂದ 35 ಲಕ್ಷ ಅಸ್ತಿತ್ವದಲ್ಲಿದ್ದ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗಿದೆ. ಇದರ ವಿರುದ್ಧ ಅವರು ಮೇಲ್ಮನವಿ ಸಲ್ಲಿಸಿದ್ದಾರೆ. ಅವರ ಮೇಲ್ಮನವಿಗಳು ಇತ್ಯರ್ಥವಾಗುವ ಮೊದಲೇ, ನಿಗದಿತ ವಿಧಾನಸಭಾ ಚುನಾವಣೆಯಲ್ಲಿ ಅವರು ತಮ್ಮ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ. ಕೇವಲ ಆ ವ್ಯಕ್ತಿಗಳಿಗೆ ಮಾತ್ರವಲ್ಲದೆ, ಇಡೀ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಇಷ್ಟು ದೊಡ್ಡ ಅನ್ಯಾಯವಾಗುತ್ತಿದ್ದರೂ ಚುನಾವಣೆಗಳು ನಿಗದಿತ ವೇಳಾಪಟ್ಟಿಯಂತೆ ನಡೆಯುತ್ತಿವೆ. ಮತ್ತೊಮ್ಮೆ, ಸುಪ್ರೀಂ ಕೋರ್ಟ್ ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಲು ವಿಫಲವಾಗಿದೆ.

**ಭಾರತದಲ್ಲಿ ಪ್ರಜಾಪ್ರಭುತ್ವದ ಸ್ಥಿತಿ ಇಂದು ಎಲ್ಲಿಗೆ ಬಂದಿದೆ?**

**ಪ್ರಸ್ತುತ ಇರುವ ಚುನಾವಣಾ ಆಯೋಗದ ವ್ಯವಸ್ಥೆಯು ಭಾರತದಲ್ಲಿ ಪ್ರಾಮಾಣಿಕವಾಗಿ, ಪಾರದರ್ಶಕವಾಗಿ, ನಿಷ್ಪಕ್ಷಪಾತವಾಗಿ, ಚುನಾವಣೆಗಳನ್ನು ನಡೆಸುತ್ತದೆ ಮತ್ತು ಭಾರತೀಯ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತದೆ**

**ಎಂದು, ನಂಬಲು ಸಾಧ್ಯವೇ?**

ಕಳೆದ ಹಲವು ವರ್ಷಗಳಿಂದ, ನಮ್ಮ ಪ್ರಜಾಪ್ರಭುತ್ವವು ನಿರಂತರ ದಾಳಿಗಳಿಗೆ ಒಳಗಾಗುತ್ತಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ 2014 ರಿಂದ ಇದು ಗಂಭೀರ ರೂಪ ಪಡೆದಿದೆ. ಈ ಸರಣಿಯಲ್ಲಿ, SIR ಎಂಬುದು ಭಾರತೀಯ ಪ್ರಜಾಪ್ರಭುತ್ವಕ್ಕೆ ನೀಡಲಾಗುತ್ತಿರುವ ಒಂದು ಭೀಕರವಾದ ಮಾರಣಾಂತಿಕ ಪೆಟ್ಟಾಗಿದೆ. **ನಮ್ಮ ಪ್ರಜಾಪ್ರಭುತ್ವವು ಅಕ್ಷರಶಃ ಹತ್ಯೆಯಾಗುತ್ತಿದೆ. ಚುನಾವಣಾ ಆಯೋಗವು (ECI) ತನ್ನ ಎಲ್ಲಾ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ.**

**ನಮ್ಮ ಪ್ರಜಾಪ್ರಭುತ್ವದ ಈಗ ನಡೆಯುತ್ತಿರುವ ಕೊಲೆಯಲ್ಲಿ ಪಾತ್ರಧಾರರು ಯಾರು ?** ಬಿಜೆಪಿ ಆಡಳಿತದ ಒಕ್ಕೂಟ ಸರ್ಕಾರ ಮತ್ತು ಬಿಜೆಪಿ ನೇಮಿಸಿದ ಚುನಾವಣಾ ಆಯೋಗವು ಈ ಹತ್ಯೆಯ ಪ್ರಾಥಮಿಕ ಕಾರಣಕರ್ತರಾಗಿದ್ದಾರೆ.

**ನಮ್ಮ ಪ್ರಜಾಪ್ರಭುತ್ವವನ್ನು ಯಾರು ರಕ್ಷಿಸಬೇಕಿತ್ತು?** ನಮ್ಮ ಒಕ್ಕೂಟ ಸರ್ಕಾರದ ಕಾರ್ಯಾಂಗವು ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಮುಂಚೂಣಿಯಲ್ಲಿ ಇರಬೇಕಾಗಿತ್ತು ಮತ್ತು ಪ್ರಜಾಪ್ರಭುತ್ವವನ್ನು ನಿರಂತರವಾಗಿ ಬಲಪಡಿಸುವುದು ಚುನಾವಣಾ ಆಯೋಗದ ಪ್ರಾಥಮಿಕ ಜವಾಬ್ದಾರಿಯಾಗಿತ್ತು. ದುರದೃಷ್ಟವಶಾತ್, ಅವೆರಡೂ ನೇರ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿವೆ. ನಮ್ಮ ನ್ಯಾಯಾಂಗ, ಸುಪ್ರೀಂ ಕೋರ್ಟ್, ನಂತರದ ರಕ್ಷಣಾ ರೇಖೆ ಆಗಿರಬೇಕಿತ್ತು. ದುರದೃಷ್ಟವಶಾತ್, ಅವರು ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಲು, ಈವರೆಗೆ ಬಹುತೇಕ ವಿಫಲರಾಗಿದ್ದಾರೆ – ಅದರಲ್ಲೂ ಹಿಂದಿನ ಹನ್ನೆರಡು ವರ್ಷಗಳಲ್ಲಿ. **ಈಗ "ಭಾರತದ ಪ್ರಜೆಗಳಾದ ನಾವು" ಕೊನೆಯ ರಕ್ಷಣಾ ರೇಖೆಯಾಗಿದ್ದೇವೆ.**

ನಮ್ಮ ಮುಂದೆ ಎರಡು ಆಯ್ಕೆಗಳಿವೆ;

(1) ಕ್ರೂರ ಸರ್ವಾಧಿಕಾರಿ ಆಡಳಿತಗಾರರ ಅಡಿಯಲ್ಲಿ, ಗುಲಾಮಗಿರಿಯನ್ನು ಒಪ್ಪಿಕೊಳ್ಳುವುದು.

(2) ನಮ್ಮ ಪ್ರಜಾಪ್ರಭುತ್ವದಲ್ಲಿ, ಉಳಿದಿರುವ ಅಲ್ಪ-ಸ್ವಲ್ಪ ಜೀವವನ್ನು, ಮರಣದಿಂದ ರಕ್ಷಿಸಿ, ಪುನರುಜ್ಜೀವನಗೊಳಿಸಿ, ಬ್ರಿಟೀಷ್ ನಂತರದ ಭಾರತದಲ್ಲಿ ಇದುವರೆಗೆ ಇದ್ದುದಕ್ಕಿಂತ, ಹೆಚ್ಚು ಪರಿಪೂರ್ಣಗೊಳಿಸುವುದು. ಇದರಲ್ಲಿ ವಿಫಲರಾದರೆ, ಕ್ರೂರ ಸರ್ವಾಧಿಕಾರ ಆಡಳಿತಗಾರರಡಿ, ಗುಲಾಮಗಿರಿ ಖಚಿತ. ಈಗ ಇದು ಸನ್ನಿಹಿತವಾಗಿ ಕಾಣುತ್ತಿದೆ.

**"ನಾವು ಭಾರತದ ಪ್ರಜೆಗಳು", ನಾವು ಈಗಾಗಲೇ ಇಷ್ಟು ಕೆಳಮಟ್ಟಕ್ಕೆ ಇಳಿದಿದ್ದರೂ, ನಮ್ಮ ಪ್ರಜಾಪ್ರಭುತ್ವವನ್ನು ನಿಜವಾಗಿಯೂ ಉಳಿಸಬಲ್ಲೆವೇ?** ನೀವು ನೋಡಬಹುದಾದಂತೆ, ನಮಗೆ ಬೇರೆ ಆಯ್ಕೆಯಿಲ್ಲ. ನಾವು ಪ್ರಯತ್ನಿಸುತ್ತಲೇ ಇರಬೇಕು. ನಮಗಾಗಿ, ನಮ್ಮ ಮಕ್ಕಳಿಗಾಗಿ, ಮತ್ತು ಮುಂದಿನ ಪೀಳಿಗೆಗಳಿಗಾಗಿ, ನಾವು ಇದನ್ನು ಮಾಡಲೇಬೇಕು. ಒಂದಲ್ಲ ಒಂದು ದಿನ ನಾವು ಯಶಸ್ವಿಯಾಗುತ್ತೇವೆ. ನಾವು ಬಳಸುವ ಮಾರ್ಗಗಳು ಕೇವಲ ಶಾಂತಿಯುತ ಮತ್ತು ಅಹಿಂಸಾತ್ಮಕವಾಗಿರಬೇಕು.

ನಮ್ಮ ದೇಶದ ಉದ್ದಗಲಕ್ಕೂ ಇರುವ ಜನರಲ್ಲಿ ನಾವು ಎದುರಿಸುತ್ತಿರುವ ಈ ಗಂಭೀರ ಪರಿಸ್ಥಿತಿಯ ಬಗ್ಗೆ ಜಾಗೃತಿ ಮೂಡಿಸುವುದು

ಮೊದಲ ನಿರ್ಣಾಯಕ ಹೆಜ್ಜೆ. ನಮ್ಮಲ್ಲಿ ಎಲ್ಲರಿಗೂ ಸ್ವಾತಂತ್ರ್ಯ ಸಿಗುವವರೆಗೆ ನಮ್ಮಲ್ಲಿ ಯಾರೂ ನಿಜವಾಗಿ ಸ್ವತಂತ್ರರಾಗಿರಲು ಸಾಧ್ಯವಿಲ್ಲ ಎಂಬುದನ್ನು ನಾವು ಗುರುತಿಸಬೇಕು.

**ನಮ್ಮ ತಕ್ಷಣದ ಗುರಿಗಳು ಏನಾಗಿರಬೇಕು?**

**ನಾವು ಇವುಗಳಿಗಾಗಿ ಒತ್ತಾಯಿಸಬೇಕು:**

**SIR (ವಿಶೇಷ ತೀವ್ರ ಪರಿಷ್ಕರಣೆ) ರದ್ದು:** ಇದು ಅತ್ಯಂತ ದೋಷಪೂರಿತವಾಗಿರುವುದರಿಂದ, ಭಾರತದಾದ್ಯಂತ (ಈಗಾಗಲೇ ಪೂರ್ಣಗೊಂಡಿರುವ ಸ್ಥಳಗಳೂ ಸೇರಿದಂತೆ) ತಕ್ಷಣವೇ ಇದನ್ನು ರದ್ದುಗೊಳಿಸಬೇಕು.

**ಚುನಾವಣಾ ಆಯುಕ್ತರ ರಾಜೀನಾಮೆ:** ಪ್ರಸ್ತುತ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಆಯುಕ್ತರು ರಾಜೀನಾಮೆ ನೀಡಬೇಕು. ನಿಷ್ಪಕ್ಷಪಾತ ಪ್ರಕ್ರಿಯೆಯ ಮೂಲಕ ಹೊಸಬರನ್ನು ನೇಮಿಸುವವರೆಗೆ ಅವರು ಕೇವಲ ಹಂಗಾಮಿಯಾಗಿ ಕಾರ್ಯನಿರ್ವಹಿಸಬೇಕು.

**ಪ್ರಸ್ತುತ ಸರ್ಕಾರಗಳ ರಾಜೀನಾಮೆ: ಒಕ್ಕೂಟ ಮತ್ತು ರಾಜ್ಯ ಮಟ್ಟದ ಪ್ರಸ್ತುತ ಸರ್ಕಾರಗಳು** ರಾಜೀನಾಮೆ ನೀಡಬೇಕು. ನಿಷ್ಪಕ್ಷಪಾತವಾಗಿ ಆಯ್ಕೆಯಾದ ಚುನಾವಣಾ ಆಯೋಗವು ಪ್ರಾಮಾಣಿಕ ಚುನಾವಣೆಗಳನ್ನು ನಡೆಸುವವರೆಗೆ, ಅವು ಕೇವಲ ಹಂಗಾಮಿ ಉಸ್ತುವಾರಿ ಸರ್ಕಾರಗಳಾಗಿ ಮುಂದುವರಿಯಬೇಕು. ಅಂತಹ ಚುನಾವಣೆಗಳ ಮೂಲಕ ಹೊಸ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳು ರಚನೆಯಾಗಿ, ಕಾನೂನುಬದ್ಧ ಕಾರ್ಯಾಂಗಗಳನ್ನು ಆರಿಸಬೇಕು.

**ನ್ಯಾಯಾಂಗ ಸುಧಾರಣೆಗಳು:** ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ **ಈಗ ಆದಂತೆ ನ್ಯಾಯಾಂಗವು ಮತ್ತೆ ವಿಫಲವಾಗದಂತೆ ಅದರ ಕಾರ್ಯವೈಖರಿಯಲ್ಲಿ ಸುಧಾರಣೆಗಳನ್ನು ತರಬೇಕು.**

**ಇವೆಲ್ಲವನ್ನೂ ಹೇಳಲು ನಾನ್ಯಾರು? ನಾನು 147 ಕೋಟಿ ಭಾರತೀಯರಲ್ಲಿ ಒಬ್ಬ ಸಾಮಾನ್ಯ ಭಾರತೀಯ.** ವೈಯಕ್ತಿಕವಾಗಿ ನಾನು ಅತ್ಯಂತ ಅಶಕ್ತ, ಇವುಗಳಲ್ಲಿ ಏನನ್ನೂ ನಾನು ಒಬ್ಬನೇ ಮಾಡಲು ಸಾಧ್ಯವಿಲ್ಲ. ಆದರೆ ಹೆಚ್ಚು ಹೆಚ್ಚು ಜನರು ಈ ಪ್ರಯತ್ನಕ್ಕೆ ಸೇರಿದಂತೆ ನಾವು ಬಲಿಷ್ಠರಾಗುತ್ತೇವೆ ಮತ್ತು ಮುಂದಿನ ಪೀಳಿಗೆಗಳ ಅನುಕೂಲಕ್ಕಾಗಿ ಈ ಬದಲಾವಣೆಗಳನ್ನು ತರಬಹುದು ಎಂಬ ಭರವಸೆ ನನಗಿದೆ.

ಎಲ್ಲಾ ಸಾಂವಿಧಾನಿಕ ಸಂಸ್ಥೆಗಳು ಮತ್ತು ಅವುಗಳ ಪದಾಧಿಕಾರಿಗಳು ಅಸ್ತಿತ್ವದಲ್ಲಿರುವುದು ಕೇವಲ **“ಭಾರತದ ಪ್ರಜೆಗಳಾದ ನಮಗೆ”** ಸೇವೆ ಸಲ್ಲಿಸಲು ಮಾತ್ರ ಎಂಬುದನ್ನು ನಾವು ನೆನಪಿನಲ್ಲಿಡಬೇಕು. **ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ. ಎಲ್ಲಾ ಸಾಂವಿಧಾನಿಕ ಸಂಸ್ಥೆಗಳು, ನಮಗೇ ನಾವೇ ಅರ್ಪಿಸಿಕೊಂಡಿರುವ ಈ ಸಂವಿಧಾನದಿಂದ ಹುಟ್ಟಿಕೊಂಡಿವೆ. ಎಲ್ಲಾ ಸಾಂವಿಧಾನಿಕ ಸಂಸ್ಥೆಗಳಲ್ಲಿರುವ ಪದಾಧಿಕಾರಿಗಳೆಲ್ಲರೂ “ಭಾರತದ ಪ್ರಜೆಗಳಾದ ನಮ್ಮ” (ನಮ್ಮೆಲ್ಲರ) ಸೇವೆಗಾಗಿಯೇ ಆ ಸ್ಥಾನಗಳಲ್ಲಿರುವುದು.**

**ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ “ನಾವು ಪ್ರಜೆಗಳೇ” ಕೊನೆಯ ರಕ್ಷಣಾ ರೇಖೆ. ಅವರು ನಮ್ಮನ್ನು ಪದೇ ಪದೇ ಹತ್ತಿಕ್ಕಬಹುದು, ಅವರು ಕ್ರೂರಿಗಳಾಗಿರಬಹುದು.** ಆದರೆ ನಮ್ಮ ಗುರಿಗಳನ್ನು ಸಾಧಿಸುವವರೆಗೆ ನಾವು ಮತ್ತೆ ಮತ್ತೆ ಸಂಘಟಿತರಾಗಬೇಕು. ಪ್ರಸ್ತುತ ಸಮಯದಲ್ಲಿ, ನಮಗೆ ಮತ್ತು ನಮ್ಮ ಭವಿಷ್ಯದ ಪೀಳಿಗೆಗಳಿಗೆ ನಾವು ನೀಡಬಹುದಾದ ಅತ್ಯುತ್ತಮ ಉಡುಗೊರೆ ಇದೇ ಆಗಿದೆ.

ಕನ್ನಡ ಭಾರತೀಯರು

Kannada Indians



ಡಾ. ರಮೇಶ್ ಬೆಲ್ಲಂಕೊಂಡ

99005 20395